ಶ್ರೀ ರಾಮಚಂದ್ರ ಮಿಷನ್®
ಆಂತರಿಕ ಪ್ರಸಾರಕ್ಕಾಗಿ ಮಾತ್ರ

ECHOES INDIA

ಜನವರಿ 2013 ಸಂಪುಟ 6 ಸಂಚಿಕೆ 1

# ನವ ವರ್ಷದ ಶುಭಾಶಯಗಳು



## ಒತ್ತಡಭರಿತ ವರ್ಷ

ಕಳೆದ ವರ್ಷ (2012)ದಲ್ಲಿ ಗುರುಗಳು ಜೀವಕಂಟಕ ಖಾಯಿಲೆಗೆ ಒಳಗಾಗಿದ್ದರು. ಜುಲೈನಲ್ಲಿ ಈ ಕಾರಣದಿಂದಾಗಿಯೇ ಗುರುಗಳು ತಮ್ಮ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದ್ದ ತಿರುಪ್ಪೂರಿನಿಂದ ಹೊರಗುಳಿಯಬೇಕಾಯಿತು. ಗುರುಗಳು ಆಗಸ್ಟ್ 15ರಂದು ಮಣಪ್ಪಾಕ್ಕಂನಲ್ಲಿ 'ವಿಶೇಷ ಭಂಡಾರ'ವನ್ನು ನಡೆಸಿ ಅಧ್ಯಕ್ಷ ಸ್ಥಾನದಿಂದ ನಿವೃತ್ತಿ ಹೊಂದುತ್ತಿರುವುದಾಗಿ ಘೋಷಿಸಿದರು. ನಂತರ ಬೆರಳೆಣಿಕೆಯ ದಿನಗಳಲ್ಲಿಯೇ ನೆರೆದ ಸುಮಾರು ಇಪ್ಪತ್ತು ಸಾವಿರ ಅಭ್ಯಾಸಿಗಳ ಸಮ್ಮುಖದಲ್ಲಿ ಅವರು ತಮ್ಮ ನಿರ್ಧಾರವನ್ನು ಬದಲಿಸಿ ಆಡಳಿತದ ಹೊರೆಯಲ್ಲಿ ಭಾಗಿಯಾಗಲುಸೋ. ಕಮಲೇಶ್ ಪಟೇಲ್‌ರವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಿದರು. ಆಗಿನಿಂದಲೂ, ಅವರ ಆರೋಗ್ಯವು ಬಲು ನಿಧಾನವಾಗಿ ಉತ್ತಮಗೊಳ್ಳುತ್ತಾ ಬಂದಿದೆ.

ಕಳೆದ ಮೂರು ತಿಂಗಳುಗಳಲ್ಲಿ ಗುರುಗಳು ತಮ್ಮ ಆರೋಗ್ಯ ಸುಧಾರಣೆಗಾಗಿ ಪ್ರಯತ್ನ ಪಟ್ಟಿದ್ದಾರೆ. ನಿಧಾನವಾಗಿ ಅವರ ಆಮ್ಲಜನಕ ಪೂರೈಕೆ ಹಾಗೂ ಗಾಲಿಕುರ್ಚಿಗಳು ಕಣ್ಮರೆಯಾದುದನ್ನು ನಾವು ನೋಡಿದೆವು. ಈಗ, ಗುರುಗಳು ತಮ್ಮ ಊರುಗೋಲು ಹಾಗು ಸಹಾಯಕರೊಬ್ಬರ ಕೈಯಾಸರೆಯೊಂದಿಗೆ ಧ್ಯಾನಮಂದಿರಕ್ಕೆ ನಡೆದು ಬಂದು ತಮ್ಮ ಗುರುಗಳ ಚಿತ್ರಕ್ಕೆ ಮಾಲಾರ್ಪಣೆ ಮಾಡುವುದನ್ನು ಕಾಣಬಹುದು. ಅವರು ತಮ್ಮ ಕಾರಿನಲ್ಲಿ ಪ್ರಯಾಣಿಸುವರು ಹಾಗು ಆಶ್ರಮದಲ್ಲಿ ಗಾಲ್ಫ್ ಗಾಡಿಯಲ್ಲಿ ತಿರುಗಾಡುವರು. ಅವರೀಗ ಭಾರತದಲ್ಲಿ ಪ್ರವಾಸ ಮಾಡುವ ಬಗ್ಗೆಯೂ ಮಾತನಾಡುತ್ತಿದ್ದಾರೆ! ಇಷ್ಟರಲ್ಲಿ, ಅಭ್ಯಾಸಿಗಳು ನಿರಂತರವಾಗಿ ಮಣಪ್ಪಾಕ್ಕಂ ಆಶ್ರಮಕ್ಕೆ ಬರುತ್ತಲೇ ಇದ್ದಾರೆ ಹಾಗು ಗುರುಗಳು ಅವರಿಗಾಗಿ ಸತ್ಸಂಗವನ್ನು ನಡೆಸಿಕೊಡುತ್ತಲೇ ಇದ್ದಾರೆ. ಅವರಿಗೆ ಆಡಳಿತಾಧಾರಿತ ಕಾರ್ಯಗಳಿಗೆ ಹಾಗು ಈಮೇಲ್ ಪ್ರತ್ಯುತ್ತರಕ್ಕಾಗಿ ಸಮಯ ದೊರೆಯುತ್ತಿದೆ.

ಗಾಯತ್ರಿಗೆ ತೆರಳಿದ ನಂತರ ಅವರ ಆರೋಗ್ಯವು ಭರದಿಂದ ಸುಧಾರಿಸುತ್ತಿರುವಂತೆ ತೋರುತ್ತದೆ. ಅವರು ಅಚಾನಕ್ಕಾಗಿ ಆಶ್ರಮಕ್ಕೆ ಭೇಟಿ ನೀಡಿ, ಸತ್ಸಂಗ ನಡೆಸಿ ಅಭ್ಯಾಸಿಗಳನ್ನು ಚಕಿತಗೊಳಿಸುತ್ತಾರೆ. ಅವರ ಆಹಾರ ಸ್ವೀಕರಣೆಯಲ್ಲಿಯೂ ಉತ್ತಮ ಪ್ರಗತಿ ಕಂಡುಬಂದಿದ್ದು, ಅವರ ವದನದಲ್ಲಿ ನೋವಿನ ಛಾಯೆ ಕಂಡುಬರದಿದ್ದರೂ ಬಲುಬೇಗ ಆಯಾಸಗೊಳ್ಳುತ್ತಾರೆ.

ಈಗ್ಗೆ ಕೆಲವು ದಿನಗಳ ಮೊದಲು, ಸೋ.ಮಾಧವರವರ ಮನೆಯಲ್ಲಿ ಅಭ್ಯಾಸಿಯೊಬ್ಬರು ಹೇಳಿದರು, "ಗುರುಗಳೇ, ಇನ್ನು ಮುಂದೆ ನಿಮಗೆ ನೋವು ಬರಕೂಡದು, ನೀವಾಗಲೇ ಸಾಕಷ್ಟು ಅನುಭವಿಸಿದ್ದೀರಿ." ಗುರುಗಳು ಉಲ್ಲಾಸದಿಂದ ಕೈಯೆತ್ತಿ, "ತಥಾಸ್ತು" ಎಂದರು. ನವೀನ ವರ್ಷವು ಗುರುಗಳ ಬಾಳಿನಲ್ಲಿ ವಸಂತ ತಂದು ಅವರಲ್ಲಿ ಆರೋಗ್ಯ, ಆನಂದಗಳು ತುಂಬಿ ತುಳುಕಲಿ ಎಂಬುದು ನಮ್ಮೆಲ್ಲರ ಆಶಯ ಮತ್ತು ಪ್ರಾರ್ಥನೆ.

ಹೊಸ ವರ್ಷದ ಮೊದಲ ದಿನದಂದು ಗುರುಗಳು ಗಾಯತ್ರಿಯಲ್ಲಿ ಬೇಗನೆ ತಯಾರಾಗಿ ಪರಿವಾರದವರು ಹಾಗೂ ಅಲ್ಲಿ ಉಪಸ್ಥಿತರಿದ್ದ ಕೆಲವು ಅಭ್ಯಾಸಿಗಳಿಗೆ ಶುಭ ಹಾರೈಸಿದರು. ಗುರುಗಳು ತಮ್ಮೆಲ್ಲಾ ಅಭ್ಯಾಸಿಗಳನ್ನು ಭೇಟಿಯಾಗುವ ಉತ್ಸುಕತೆಯಲ್ಲಿ ಎಲ್ಲವನ್ನೂ ಬೇಗನೇ ಮುಗಿಸಿ ಆಶ್ರಮಕ್ಕೆ ತೆರಳಲು ಕಾತುರರಾಗಿದ್ದರು. ಸಮಯಕ್ಕೇ ಮೊದಲೇ ಅವರು ಆಶ್ರಮಕ್ಕೆ ತಲುಪಿದರು.ಆಶ್ರಮದಲ್ಲಿ ಸುಮಾರು 7500 ಅಭ್ಯಾಸಿಗಳಿದ್ದರು. ಗುರುಗಳು ಆಶ್ರಮದೊಳಗೆ ಆಗಮಿಸುತ್ತಿದ್ದಂತೆಯೇ ಅಭ್ಯಾಸಿಗಳು ಹಾಗೂ ಮಕ್ಕಳು ಅವರಿಗೆ ಶುಭ ಕೋರಿದರು. ಗುರುಗಳು ಪೂರ್ಣ ಒಂದು ಘಂಟೆಯ ಕಾಲ ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ಅವರು ನೀಡಿದ ಉಪನ್ಯಾಸದಲ್ಲಿ "ಪೂರ್ವಾಗ್ರಹ," ಎಂದರೆ ಪೂರ್ವ ನಿರ್ಧಾರದಿಂದ ನಾವು ಹೇಗೆ ಇತರರ ಬಗ್ಗೆ ಅಭಿಪ್ರಾಯ ಹೊಂದುತ್ತೇವೆಯೋ ಹಾಗೆಯೇ ಸ್ವತಃ ನಮ್ಮನ್ನು ನಾವು ಅಳೆಯುವುದೂ ಪೂರ್ವಾಗ್ರಹವೇ. ಏಕೆಂದರೆ "ನನ್ನ ಬಗ್ಗೆ ನಾನು ನಿರ್ಧಾರ ತಾಳುವುದರಿಂದ ಆ ತೀರ್ಮಾನಕ್ಕೆ ನಾನು ಅಂಟಿಕೊಳ್ಳುತ್ತೇನೆ" ಎಂದು ಹೇಳಿದರು. ಅವರು "ಮಾನವ ಜೀವನದ ಗುರಿ ಸಂತೋಷವಲ್ಲ, ವಿಕಾಸ" ಎಂದು ಹೇಳಿದರು.

ಉಪನ್ಯಾಸದ ನಂತರ ಗುರುಗಳು ಸಭಾಂಗಣ ಕಟ್ಟಡಕ್ಕೆ ತೆರಳಿದರು. ಅವರು ಆಯಾಸಗೊಂಡಿದ್ದರೂ ಸಹ ಅಭ್ಯಾಸಿಗಳನ್ನು ಭೇಟಿಯಾಗಿ, ಉಡುಗೊರೆಗಳನ್ನು ಸ್ವೀಕರಿಸಿ, ಮಿಷನ್ನಿನ ವ್ಯವಸ್ಥಾಪನೆಯನ್ನು ಚರ್ಚಿಸಿ, ಶಿಶುಗಳಿಗೆ ಹೆಸರನ್ನೂ ನೀಡಿದರು. ಆಶ್ರಮದಲ್ಲಿ ಅವರು ಭೋಜನ ಪೂರೈಸಿ ಗಾಯತ್ರಿಗೆ ಮಧ್ಯಾಹ್ನ ಸುಮಾರು ಒಂಧು ಘಂಟೆಯ ಹೊತ್ತಿಗೆ ತೆರಳಿದರು. ಸಂಜೆ ಪುನಃ ಅಂದೇ ರಾತ್ರಿ ಹೊರಡುತ್ತಿದ್ದ ಫ್ರಾನ್ಸ್ ಹಾಗು ಸ್ವಿಟ್ಜರ್ಲ್ಯಾಂಡಿನ ಅಭ್ಯಾಸಿಗಳನ್ನು ಭೇಟಿಯಾದರು. ಅವರು ಯುರೋಪಿನ ತಮ್ಮ ಪ್ರವಾಸದ ಕುರಿತು ಮಾತನಾಡಿದರು.

ಗುರುಗಳು, "ಬಾಬೂಜಿಯವರು ಅಜ್ಞಾನದಿಂದ ಜ್ಞಾನ-ಅಲ್ಲಿಂದ ಪುನಃ ಅಜ್ಞಾನದ ಬಗ್ಗೆ ಮಾತನಾಡುತ್ತಾರೆ. ಈ ಎರಡು ಅಜ್ಞಾನಗಳ ನಡುವಣ ವ್ಯತ್ಯಾಸವೇನು? ಮೊದಲು ಹೇಳಿದ ಅಜ್ಞಾನದಲ್ಲಿ ನಿಮಗೇನೂ ತಿಳಿದಿರುವುದಿಲ್ಲ, ಎರಡನೆಯ ಬಗೆಯ ಅಜ್ಞಾನದಲ್ಲಿ ನಿಮಗೆಲ್ಲಾ ತಿಳಿದಿದ್ದರೂ ಏನೂ ಅರಿವಿರುವುದಿಲ್ಲ. ಜ್ಞಾನವು ಅಪರಿಮಿತ. ಜ್ಞಾನವನ್ನೆಂದೂ ಮುಗಿಸಿಬಿಡಲಾಗದು."



## ಅಕ್ಟೋಬರ್ 2012

ಅಕ್ಟೋಬರ್ ತಿಂಗಳ ಮೊದಲ ಎರಡು ವಾರಗಳಲ್ಲಿ ಗುರುಗಳ ಆರೋಗ್ಯವು ಸುಧಾರಿಸುತ್ತಿದ್ದು ಅವರು ಪ್ರತಿದಿನ ಬೆಳಗ್ಗೆ ಫಿಸಿಯೋತೆರಪಿ, ವಿಶ್ರಾಂತಿ ಮತ್ತು ನಂತರ ಉಪಾಹಾರ ಸೇವನೆಯ ದಿನಚರಿ ಅನುಸರಿಸುತ್ತಿದ್ದರು. ಇದಾದ ನಂತರ ಗುರುಗಳು ತಮ್ಮ ಇ-ಮೇಲ್ ಕೆಲಸಗಳಲ್ಲಿ ತೊಡಗುತ್ತಿದ್ದರು.

ಅಕ್ಟೋಬರ್ 12ರ ಶುಕ್ರವಾರ, ಬೆಳಗಿನ 9ರ ಸತ್ಸಂಗದ ನಂತರ ಗುರುಗಳು ಪುಣೆಯ ಅಭ್ಯಾಸಿಗಳನ್ನು ಭೇಟಿಯಾಗಲು ಡಾರ್ಮ್ 'ಎ' ಗೆ ಬಂದರು. ಸಣ್ಣ ಭಾಷಣದ ನಂತರ ಎಲ್ಲರಿಗೂ ಬೈಠಕನ್ನು ನೀಡಿದರು.

ಅಕ್ಟೋಬರ್ 13ರ ಶನಿವಾರ ಗುರುಗಳ ಕುಟೀರದ ನವೀಕರಣ ಕಾರ್ಯ ಪ್ರಾರಂಭವಾಯಿತು. ಕುಟೀರವನ್ನು ಕೆಡವಲಾಗಿದ್ದು ಕೆಲಸ ಪ್ರಗತಿಯಲ್ಲಿದೆ.

ಒಮ್ಮೆ ಮಧ್ಯಾಹ್ನದ ಊಟದ ನಂತರ ಗುರುಗಳು ತಮ್ಮನ್ನು ಭೇಟಿ ಮಾಡಲು ಬಂದಿದ್ದ ಹದಿನೈದು ಜನ ಫ್ರಾನ್ಸ್ ದೇಶದ ಅಭ್ಯಾಸಿಗಳೊಡನೆ ಒಂದು ಗಂಟೆಗೂ ಹೆಚ್ಚು ಕಾಲ ಮಾತನಾಡುತ್ತಿದ್ದರು. ಗುರುಗಳ ಹಿಂದಿನ ದಿನಗಳ ನೆನಪು ಮಾಡಿಕೊಳ್ಳುತ್ತ ಅಲ್ಲಿದ್ದ ವ್ಯಕ್ತಿಯೊಬ್ಬರ ಹೆಸರನ್ನು ಹೇಳಿದಾಗ ಆ ಸಹೋದರಿಯು ಭಾವುಕರಾಗಿದ್ದನ್ನು ಕಾಣಬಹುದಾಗಿತ್ತು. ಗುರುಗಳು, ನಾವು ಪ್ರೀತಿಸಿದಾಗ, ನೆನಪಿಟ್ಟುಕೊಳ್ಳುತ್ತೇವೆ ಎಂದರು. ಭೌತಿಕ ವಿಷಯಗಳ ನೆನಪೂ ಸಹ ಪರಿಣಾಮಕಾರಿಯಾಗಿರಬಲ್ಲುದು, ನಾವು ಎಂದೋ ಕೇಳಿದ್ದ, ನೋಡಿದ್ದ ಅಥವಾ ವಾಸನೆ ಗ್ರಹಿಸಿದ್ದನ್ನೂ ಸಹ ನೆನಪಿಡುತ್ತೇವೆ. ಈ ಬಗೆಯ ನೆನಪುಗಳು ನಮಗೆ ಆ ನಿರ್ದಿಷ್ಟ ಘಟನೆಯನ್ನು ಪ್ರಸ್ತುತಕ್ಕೂ ತರುತ್ತದೆ.

ಅಕ್ಟೋಬರ್ 14ರ ಭಾನುವಾರ ಅತ್ಯಂತ ವಿಶೇಷವಾದ ದಿನವಾಗಿತ್ತು. ಗುರುಗಳು ಮೂರು ತಿಂಗಳುಗಳಿಗೂ ಹೆಚ್ಚಿನ ಅವಧಿಯ ನಂತರ ಮೊದಲಬಾರಿಗೆ ಭಾನುವಾರದ ಸತ್ಸಂಗ ನಡೆಸಲು ಬಂದಿದ್ದರು. ಅವರು ಒಂದು ಗಂಟೆಗೂ ಹೆಚ್ಚಿನ ಅವಧಿಯ ಸತ್ಸಂಗವಾಗಿತ್ತು. ಇದಾದ ನಂತರ ಅವರು ಸೋ. ಮಾಧವರ ಮನೆಗೆ ತೆರಳಿ ಅಲ್ಲಿ ಹೊರ ಆವರಣದಲ್ಲಿ ಕುಳಿತರು. ಸೋ.ಸಂಸ್ಕೃತ ಕಣ್ಣನ್ ಅವರು ಎಂದಿನಂತೆ ಭಗವದ್ಗೀತೆಯ ಅಧ್ಯಾಯವನ್ನು ಓದುತ್ತ ಅದರ ಶ್ಲೋಕಗಳಿಗೆ ವಿವರಣೆಯನ್ನು ನೀಡುತ್ತಿದ್ದರು.

ಅಕ್ಟೋಬರ್ 20ರ ಶನಿವಾರ ಗುರುಗಳ ಆರೋಗ್ಯದ ವಿಚಾರದಲ್ಲಿ ಮತ್ತೊಂದು ಮಹತ್ವದ ದಿನವಾಗಿತ್ತು. ಅವರು ಕೇವಲ ಒಬ್ಬ ವ್ಯಕ್ತಿಯ ಮತ್ತು ತಮ್ಮ ಊರುಗೋಲಿನ ಸಹಾಯದಿಂದ ನಡೆದುಕೊಂಡು ಬಂದರು. ಗುರುಗಳು ಇರಾನ್‌ನಿಂದ ಬಂದಿದ್ದ ಅಭ್ಯಾಸಿ ಸಹೋದರಿಯರ ಗುಂಪನ್ನು ಭೇಟಿಯಾದರು. ಮತ್ತು ಅವರೊಡನೆ ಬಹು ದೀರ್ಘಕಾಲ ಸಂಭಾಷಣೆ ನಡೆಸಿದರು. ಅವರು ಎಲ್ಲರ ಮೇಲೂ ಸೂಕ್ಷ್ಮವಾಗಿ ಮತ್ತು ಆಳವಾಗಿ ಕೆಲಸ ಮಾಡುತ್ತಿದ್ದುದನ್ನು ನಾವು ಅನುಭವಿಸಬಹುದಿತ್ತು.

ಗುರುಗಳು 'ಆಧ್ಯಾತ್ಮಿಕ ಕಾರ್ಯದ ವಿಚಾರಕ್ಕೆ ಬಂದರೆ ಅದಕ್ಕೆ ಮೊದಲೂ ಇಲ್ಲ, ಕೊನೆಯೂ ಇಲ್ಲ. ಆ ಕಾರ್ಯವು ಸದಾ ನಡೆಯುತ್ತಿದ್ದು ಅದು ಭವಿಷ್ಯದಲ್ಲಿಯೂ ಹಾಗೆಯೇ ಮುಂದುವರೆಯುತ್ತದೆ ಮತ್ತು ಈಗ ಪ್ರಸ್ತುತದಲ್ಲಿಯೂ ಮಾಡಬೇಕಾದ ಕೆಲಸ ಬೇಕಾದಷ್ಟಿದೆ. ಇದುವರೆಗೆ ಏನೂ ಕೆಲಸ ಆಗಿಯೇ ಇಲ್ಲ ಎಂದು ಯೋಚಿಸುವುದು ಅಹಂಕಾರದ ಮಾತಾಗುತ್ತದೆ. ನಮ್ಮ ಕೆಲಸ ನಮ್ಮ ಬಹಳಷ್ಟು ಪೂರ್ವಿಕರು ಮಾಡಿರುವ ಕೆಲಸದ ಮೇಲುಸ್ತರದ ಮೇಲೆ ಮಾತ್ರ ಇದೆ. ಇದುವರೆಗೂ ಏನೂ ಕೆಲಸ ಅಗಿಯೇ ಇಲ್ಲ ಎಂದು ನಮ್ಮ ಅಹಂಕಾರ ಯೋಚಿಸಲು ನಾವು ಬಿಡಬಾರದು. ಇದರ ಬದಲು ನಾವು ಅತ್ಯಂತ ವಿನಮ್ರತೆ ಮತ್ತು ಪ್ರೇಮದಿಂದ ಕೆಲಸದಲ್ಲಿ ತೊಡಗಿಕೊಳ್ಳಬೇಕು.

ಒಂದು ಸಂಜೆ ಗುರುಗಳು ಒಳಗೇ ಉಳಿದಿದ್ದು, ಚರ್ಚಾ ಸ್ಪರ್ಧೆಯಲ್ಲಿ ಎರಡನೇ ಬಹುಮಾನ ಗಳಿಸಿ ತಮ್ಮನ್ನು ಕಾಣಲು ಬಂದಿದ್ದ ಒಮೆಗಾ ಶಾಲೆಯ ಮಕ್ಕಳನ್ನು ಭೇಟಿಯಾದರು. ಮಕ್ಕಳನ್ನು ಸಂತೋಷದಿಂದ ಭೇಟಿಯಾದ ಗುರುಗಳು ತಮ್ಮ ಅನುಭವಗಳನ್ನು ಅವರೊಡನೆ ಹಂಚಿಕೊಂಡರು.

ಸೋ ಎ.ಪಿ. ದುರೈ ಅವರು ಗುರುಗಳನ್ನು ಭೇಟಿಯಾಗಿ ತಮಿಳುನಾಡಿನ ಅನೇಕ ಕೇಂದ್ರಗಳಲ್ಲಿನ ತಮ್ಮ ಪ್ರವಾಸದ ಬಗ್ಗೆ ಮಾತನಾಡುತ್ತ ಇಂದು ಎಲ್ಲಾ ಕೇಂದ್ರಗಳಲ್ಲೂ ಉತ್ತಮ ಪ್ರಗತಿ ಕಂಡು ಬರುತ್ತಿದ್ದರೆ ಅದಕ್ಕೆ ಕಾರಣ ಈ ಕೇಂದ್ರಗಳಿಗೆ ಮತ್ತು ಪಟ್ಟಣಗಳಿಗೆ ಗುರುಗಳ ನಿರಂತರ ಮತ್ತು ಅವಿಶ್ರಾಂತ ಭೇಟಿ ಮತ್ತು ಪರಿಶ್ರಮಗಳೇ ಕಾರಣ ಎಂದರು. ಅದಕ್ಕೆ ಗುರುಗಳು ನಾವು 30-40ರ ವಯಸ್ಸಿನ ಆಸುಪಾಸಿನಲ್ಲಿದ್ದಾಗ ಈ ತರಹದ ಪ್ರಯಾಣ ಮತ್ತು ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಸಾಧ್ಯತೆ ಇರುತ್ತದೆ. ವಯಸ್ಸಾದಂತೆಲ್ಲ ನಮಗೆ ಪ್ರಯಾಣ ಮತ್ತು ದೈಹಿಕ ಶ್ರಮ ಅಸಾಧ್ಯವಾಗುತ್ತದೆ ಎಂದರು.

ಒಂದು ದಿನ ಗುರುಗಳು ಆಶ್ರಮದ ಸುತ್ತ ಸುತ್ತಾಡಿ ಕುಟೀರದ ಪುನರ್ನಿರ್ಮಾಣದ ಕೆಲಸ ಹಾಗು ಧ್ಯಾನ ಮಂದಿರದಲ್ಲಿ ನಡೆಯುತ್ತಿರುವ ಕೆಲಸಗಳನ್ನು ನೋಡಿಕೊಂಡು ಡಾರ್ಮ್ 'ಎ' ಗೆ ಭಾಷಣ ಮತ್ತು ಬೈಠಕನ್ನು ನೀಡುವ ಸಲುವಾಗಿ ಬಂದರು. ನಂತರ ಕ್ಯಾಂಟೀನ್ ಮತ್ತಿತರೆಡೆ ನಿಲ್ಲುತ್ತಾ ಅಭ್ಯಾಸಿಗಳೊಡನೆ ಸಮಯ ಕಳೆದರು. ಇದು ಅತ್ಯಂತ ದೀರ್ಘವಾದ ಸುತ್ತಾಟವಾಗಿ ಗುರುಗಳ ಆರೋಗ್ಯದ ಮೇಲೆ



ಪರಿಣಾಮ ಬೀರಿತು. ಅವರು ಬಹಳ ಆಯಾಸಗೊಂಡು ದೈಹಿಕವಾಗಿ ಯಾತನೆಗೊಳಗಾಗಿ ಇಡೀ ದಿನ ವಿಶ್ರಾಂತಿ ಪಡೆದರು. ಸಂಜೆಯ ವೇಳೆಗೆ ಗುರುಗಳಿಗೆ ಆರೋಗ್ಯದ ಸಮಸ್ಯೆ ಉಂಟಾಗಿ, ವೈದ್ಯರು ಪರೀಕ್ಷಿಸಿ ಅದು ಆಯಾಸ ಮತ್ತು ಒತ್ತಡದಿಂದುಂಟಾದದ್ದೆಂದು ತಿಳಿಸಿದರು.

ಅಕ್ಟೋಬರ್ ಕೊನೆಯ ವೇಳೆಗೆ ಗುರುಗಳಿಗೆ ಸ್ವಲ್ಪ ಜ್ವರವಿತ್ತು. ಅವರು ಬಹುತೇಕ ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು ಮತ್ತು ಅವರಿಗೆ ಡ್ರಿಪ್‌ಗಳನ್ನು ನೀಡುತ್ತಿದ್ದು ಬೆನ್ನಿಗೆ ಒತ್ತು ಇಟ್ಟುಕೊಂಡು ಕೂರಬಲ್ಲವರಾಗಿದ್ದರು. ಅವರು ಅತೀ ಕಡಿಮೆ ಮಾತನಾಡುತ್ತಿದ್ದು ಬಹಳ ನಿತ್ರಾಣರಾಗಿದ್ದರು. ಗುರುಗಳು "ನನಗೆ ಏನನ್ನೂ ತಿನ್ನಬೇಕೆನಿಸುತ್ತಿಲ್ಲ, ಆದರೆ ಇವರೆಲ್ಲ ನನಗೆ ಉಣಿಸುತ್ತಾರೆ ಮತ್ತು ನಾನು ಸ್ವಲ್ಪವಾದರೂ ತಿನ್ನುವಂತೆ ನೋಡಿಕೊಳ್ಳುತ್ತಾರೆ" ಎಂದರು.





ಬೆಂಗಳೂರಿನ ಕಾರ್ಯಾಗಾರದ ವಿಚಾರವಾಗಿ ಸೋ. ಕಮಲೇಶರು ಗುರುಗಳಿಗೆ ತಿಳಿಸುತ್ತಾ,ಸಂಜೆಯ ಸತ್ಸಂಗವು ಅತ್ಯಂತ ವಿಶೇಷವಾದುದಾಗಿದ್ದು ಜಗತ್ತನ್ನೇ ಮರೆಸುವಂತಿತ್ತು ಎಂದರು. ಆಗ ಗುರುಗಳು ಅಲ್ಲಿ ಸಿದ್ಧತೆ ಉತ್ತಮವಾಗಿತ್ತು ಅನಿಸುತ್ತದೆ ಎನ್ನಲು ಬೆಂಗಳೂರಿನ ಪ್ರಶಿಕ್ಷಕರೊಬ್ಬರು ಸಭೆಯ ಮೊದಲು ಎಲ್ಲಾ ಅಭ್ಯಾಸಿಗಳು ವೈಯುಕ್ತಿಕ ಬೈಠಕನ್ನು ಪಡೆದಿದ್ದರೆಂದು ಖಚಿತ ಪಡಿಸಿದರು. ಗುರುಗಳು "ಹೌದು, ಇದು ಶುದ್ಧೀಕರಣದಿಂದಾಗಿ ಸಾಧ್ಯವಾಯಿತು" ಎಂದರು. ಮಣಪ್ಪಾಕ್ಕಂಗೆ ಬರುವ ಮೊದಲು ಎಲ್ಲರೂ ವೈಯುಕ್ತಿಕ ಬೈಠಕನ್ನು ಪಡೆದಿದ್ದರೆ ಅವರು ನಮಗೆ ಪ್ರೀತಿಯಿಂದ ಉಡುಗೊರೆಯನ್ನು ಅನುಗ್ರಹಿಪುದನ್ನು ಪಡೆಯಲು ಸಾಧ್ಯವಾಗುತ್ತದೆ.

## ನವೆಂಬರ್ 2012

ಗುರುಗಳ ಆರೋಗ್ಯವು ಸ್ವಲ್ಪ ಕಡಿಮೆಯಾಗಿದ್ದು, ರೋಗ ನಿರೋಧಕಗಳು ಅವರನ್ನು ಮಂಕಾಗಿಸಿದ್ದವು ಮತ್ತು ಬಹಳಷ್ಟು ಕಾಲ ಜೋಂಪಿನಲ್ಲಿರುವಂತೆ ಮಾಡಿದ್ದವು. ಅವರು BiPAPಯಂತ್ರದ ಸಹಾಯವಿಲ್ಲದೆ ಸರಿಯಾದ ಉಸಿರಾಟ ನಡೆಸಲೂ ಶಕ್ತರಾಗಿರಲಿಲ್ಲ. ಅವರ ಶ್ವಾಸಕೋಶದಲ್ಲಿ ಸೇರಿದ್ದ ದ್ರವಾಂಶವು ಕರಗಿದ ನಂತರ ಆರೋಗ್ಯದಲ್ಲಿ ಅಲ್ಪ ಸುಧಾರಣೆ ಕಂಡು ಬಂದಿತು. ಒಳಗಿನ ಸೋಂಕು ಪತ್ತೆ ಮಾಡಲು ACTಸ್ಕ್ಯಾನ್ ಸಹ ಮಾಡಿಸಲಾಯಿತು.

ದೀಪಾವಳಿಯ ಕೆಲದಿನಗಳ ಮೊದಲು ಸೋ.ಭಾಸ್ಕರನ್ ಅವರು ವಿಶೇಷವಾಗಿ ತಯಾರಿಸಿದ್ದ ಸಿಹಿ ತಿನಿಸುಗಳನ್ನು ತಂದರು. ಗುರುಗಳು ಅದನ್ನು ತಯಾರಿಸುವ ಬಗೆ, ಅದನ್ನು ಒದ್ದೆ ಕೈಗಳಿಂದ ಮುಟ್ಟಿದರೆ ಬೇಗನೆ ಕೆಡುತ್ತದೆ ಇತ್ಯಾದಿ ವಿಷಯಗಳನ್ನು ವಿವರಿಸಿದರು. ಅವರು ವಿವರವಾಗಿ ಗಮನಿಸುವ ರೀತಿ, ಅವರು ಮಾಡುವ ಯಾವುದೇ ಕೆಲಸದಲ್ಲಿ ಪರಿಪೂರ್ಣತೆ ಇರುವುದು ಅನುಪಮವಾದುದು.

ನವೆಂಬರ್ 9 ರ ಶುಕ್ರವಾರ ಸೋ.ಕಮಲೇಶರು ಆಶ್ರಮದಲ್ಲಿ ಕೆಲ ವಿವಾಹಗಳನ್ನು ನೆರವೇರಿಸಿದರು. ನಂತರ ಅಭ್ಯಾಸಿ ಜೋಡಿಗಳು ಗುರುಗಳನ್ನು ಭೇಟಿ ಮಾಡಿದರು. ಗುರುಗಳು ಅವರೆಲ್ಲರಿಗೂ ಬೈಠಕ್ ನೀಡಿದರು. ಸಾಯಂಕಾಲ ಫಿಸಿಯೋತೆರಪಿ ಮುಗಿದ ನಂತರ ಅವರು ಹೊರಗೆ ನಡೆದು ಬಂದು ಹಜಾರದಲ್ಲಿ ಕುಳಿತರು. ಅಭ್ಯಾಸಿಗಳು ಅವರ ಸುತ್ತ ಸೇರಲು ಶುರುವಾಗುತ್ತಿದ್ದಂತೆ ಅವರು ಕಣ್ಮುಚ್ಚಿ ಬೈಠಕ್ ನೀಡುತ್ತಿರುವವರಂತೆ ಕುಳಿತರು. 30 ನಿಮಿಷದ ನಂತರ ಕಣ್ತೆರೆದು ಶುಭರಾತ್ರಿ ಹೇಳಿ ಒಳಗೆ ಹೋದರು.

ತರುವಾಯ ಇದು ನಿತ್ಯ ಸಾಯಂಕಾಲದ ದಿನಚರಿಯೇ ಆಯಿತು. ಗುರುಗಳು ಬರುವುದು, ಹಜಾರದಲ್ಲಿ ಕುಳಿತುಕೊಳ್ಳುವುದು, ಅಭ್ಯಾಸಿಗಳು ಅವರ ಸುತ್ತಾ ನೆರೆಯುತ್ತಿದ್ದಂತೆ ಅವರು ಕಣ್ಮುಚ್ಚಿ ಕೂರುವುದು. ಅವರು "ಶುರುಮಾಡಿ" ಎಂದು ಹೇಳದೆ ಕೊನೆಯಲ್ಲಿ ಕೇವಲ 'ಸಾಕು ಮಾಡಿ' ಎಂದು ಹೇಳಿದ ಸಂದರ್ಭಗಳನೇಕ. ಒಂದು ಸಂಜೆ ಗುರುಗಳು ಒಳಗೆ ಹೋದ ನಂತರ ನಾಗಪುರ ಕೇಂದ್ರದ ಕೆಲ ಮಕ್ಕಳು ಎರಡು ದಿನಗಳಿಂದ ಗುರುಗಳನ್ನು ಭೇಟಿ ಮಾಡಲು ಯತ್ನಿಸುತ್ತಿದ್ದವರು ಒಳ ಬಂದು "ಗುರುಗಳೇ ಬೇಗನೆ ಗುಣಮುಖರಾಗಿ, ನಾವು ನಿಮ್ಮನ್ನು ಪ್ರೀತಿಸುತ್ತೇವೆ" ಎಂದರು. ಅದಕ್ಕೆ ಗುರುಗಳು "ಹೌದು ನನಗೆ ಗೊತ್ತು, ಇದೇ ಕಾರಣಕ್ಕಾಗಿಯೇ ನಾನು ಜೀವಿಸಿದ್ದೇನೆ" ಎಂದರು, ಅದನ್ನು ಹೇಳುವಾಗ ಅವರ ಮುಖದ ಮೇಲಿನ ಪ್ರಭೆಯನ್ನು ಯಾರಾದರೂ ಗಮನಿಸಬಹುದಿತ್ತು.

ನವೆಂಬರ್ 11ರ ಭಾನುವಾರ ಗುರುಗಳು ಅವರ ಯಾಂತ್ರೀಕೃತ ಗಾಲಿ ಕುರ್ಚಿಯನ್ನು ತಾವೇ ಸ್ವತಃ ಚಾಲನೆ ಮಾಡಿಕೊಂಡು ಬಂದರು. ತಿರುವುಗಳಲ್ಲಿ ಆರಾಮದಾಯಕವಾಗಿ ನಿರ್ವಹಿಸುತ್ತ ಸುಲಭವಾಗಿಯೇ ವೇದಿಕೆಯ ಮೇಲೆ ಬಂದರು. ಗುರುಗಳು ಧ್ಯಾನ ಮಂದಿರಕ್ಕೆ ಆಗಮಿಸುತ್ತಿದ್ದಂತೆಯೇ ಎಲ್ಲಾ ಅಭ್ಯಾಸಿಗಳು ಚಪ್ಪಾಳೆ ಹೊಡೆದು ಅತ್ಯಂತ ಸಂತೋಷ ಮತ್ತು ಪ್ರೇಮ ಕೂಡಿದ ಹೃದಯದಿಂದ ತಮ್ಮ ಪ್ರೀತಿ ಪಾತ್ರರನ್ನು ಸ್ವಾಗತಿಸಿದರು. ಗುರುಗಳು ನಡೆಸಿಕೊಟ್ಟ ಸತ್ಸಂಗ 1 ಗಂಟೆ 5 ನಿಮಿಷಗಳ ಕಾಲ ಅವಧಿಯದಾಗಿತ್ತು. ದೀಪಾವಳಿಯ ದಿನ ಗುರುಗಳು ಆರೋಗ್ಯದಿಂದಿರದಿದ್ದರೂ ಸತ್ಸಂಗ ನಡೆಸಿದರು. ಅವರಿಗಿರುವ ಉನ್ನತ ಸಂಕಲ್ಪ ಶಕ್ತಿಯನ್ನು ಬಳಸಿ ಅವರು ತಮ್ಮನ್ನು ಕಾಣಲು ಬಂದಿದ್ದ ಅಭ್ಯಾಸಿಗಳನ್ನು ಭೇಟಿ ಮಾಡಲು ಬಂದರು. ಗುರುಗಳನ್ನು ಕಂಡು ಹಾರೈಸಲು ಬಂದಿದ್ದ ಅನೇಕ ಅಭ್ಯಾಸಿಗಳನ್ನು ಅವರು ಭೇಟಿ ಮಾಡಿದರು. ಅವರು ಐದು ನಿಮಿಷಗಳಲ್ಲಿ ಐವತ್ತಕ್ಕೂ ಹೆಚ್ಚಿನ ಅಭ್ಯಾಸಿಗಳನ್ನು ಭೇಟಿಯಾದ ನಂತರ "ನನಗೆ ಆಯಾಸವಾಗಿದೆ, ನಾನು ವಿರಮಿಸಬೇಕು, ಇನ್ಯಾರನ್ನೂ ಭೇಟಿಯಾಗಲಾರೆ" ಎಂದರು. ಮತ್ತೆ ಮಧ್ಯಾಹ್ನ ಅವರ ಮಲಗುವ ಕೋಣೆಯಲ್ಲಿಯೇ ಮತ್ತಷ್ಟು ಅಭ್ಯಾಸಿಗಳನ್ನು ಭೇಟಿಯಾದರು.

ದಕ್ಷಿಣಪೂರ್ವ ಏಷ್ಯಾದ ಕೇಂದ್ರಗಳ ಸುಮಾರು 30 ಪ್ರಶಿಕ್ಷಕರೊಡನೆ ಗುರುಗಳು ಸಭೆ ನಡೆಸಿದರು. ಅವರಿಗೆ ಬೈಠಕನ್ನು ನೀಡಿದ ನಂತರ ಶಕ್ತಿಯುತವಾದ ಭಾಷಣವನ್ನು ಮಾಡಿ ಪ್ರಶಿಕ್ಷಕರ ಕಾರ್ಯ ಮತ್ತು ಇತರೆ ಕರ್ತವ್ಯಗಳ ಬಗ್ಗೆ ತಿಳಿಸಿದರು. ಗುರುಗಳು ನಾವು ಕೆಲಸವನ್ನು ಗಂಭೀರವಾಗಿ ಪರಿಗಣಿಸಿದಲ್ಲಿ ಹೇಗೆ ವಿಷಯಗಳು ತಮಗೆ ತಾವೇ ತೆರೆದುಕೊಳ್ಳುತ್ತವೆ ಮತ್ತು ನಾವು ಕೆಲಸ ಮಾಡುವುದರಿಂದ ಕಲಿಯುವ ಮತ್ತು ಅದರಿಂದ ನಮಗೆ ಲಭಿಸುವ ಲಾಭಗಳಿಂದ ನಾವೇ ಆಶ್ಚರ್ಯಚಕಿತರಾಗುತ್ತೇವೆ ಎಂದರು. ಬೈಠಕನ್ನು ಶುರು

ಮಾಡುವ ಮತ್ತು ಮುಗಿಸುವ ವಿಚಾರದಲ್ಲಿ ಗುರುಗಳು "ನಾವು ಕೆಲಸವನ್ನು ಪ್ರಾರಂಭಿಸಬಹುದಷ್ಟೇ, ಅದನ್ನು ಮುಗಿಸುವುದು ಅವರ (ಬಾಬೂಜಿ) ಕೆಲಸ" ಎಂದರು.

ಒಂದು ರಾತ್ರಿ ಸಿನಿಮಾ ನೋಡಿದ ನಂತರ ಗುರುಗಳು 'ಮೋರ್-ಕಲಿ', ಒಂದು ದಕ್ಷಿಣಭಾರತೀಯ ಅಡುಗೆ, ಮೊಸರು ಮತ್ತು ಅಕ್ಕಿ ಹಿಟ್ಟು ಸೇರಿಸಿ ಮಾಡುವ ಅದನ್ನು ಎಲ್ಲರಿಗೂ ಹಂಚಿ "ಇದು ನಾನು ಗುಣಮುಖನಾಗುತ್ತಿರುವುದರ ಸೂಚನೆ" ಎಂದರು. ಗುರುಗಳ ಆರೋಗ್ಯ ಸುಧಾರಿಸುತ್ತಿದ್ದಂತೆ ಸೋ. ಸಂಸ್ಕೃತ ಕಣ್ಣನ್ ಅವರ ಗೀತಾವಾಚನ ಭಾನುವಾರಗಳು ನಡೆಯುತ್ತಿತ್ತು. ತಿಂಗಳ ಕೊನೆಯ ವೇಳೆಗೆ ಗುರುಗಳು ಹೆಚ್ಚು ತಿರುಗಾಡುವಂತಾದರು. ಅವರು ಹೊರಗೆ ಬಂದು ಬಿಸಿಲಿನಲ್ಲಿ ಕುಳಿತು ಅಭ್ಯಾಸಿಗಳನ್ನು ಭೇಟಿಯಾಗುತ್ತಿದ್ದರು. ಒಮ್ಮೆ ಧ್ಯಾನ ಮಂದಿರದ ವೇದಿಕೆಯಲ್ಲಿನ ಮಾರ್ಪಾಟುಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಗುರುಗಳು ನೋಡುತ್ತಿದ್ದರು. ಅವರಿಗೆ ಎಲ್ಲರಿಂದಲೂ ಅಭಿಪ್ರಾಯ ಪಡೆಯುವ ಆಸಕ್ತಿಯಿತ್ತು. "ನಾವಿಲ್ಲಿ ಮಿದುಳಿಗೆ ಕಸರತ್ತು ನೀಡುತ್ತಿದ್ದೇವೆ" ಎಂದರು. ಕೊನೆಗೆ ಎಲ್ಲರ ಅಭಿಪ್ರಾಯ ಪಡೆದ ನಂತರ ಆ ಕೆಲಸದ ಮುಂದಿನ ಕ್ರಮದಬಗ್ಗೆ ಸೂಚನೆಗಳನ್ನು ನೀಡಿದರು.

ಗುರುಗಳ ಆರೋಗ್ಯದಲ್ಲಿ ಚೇತರಿಕೆಯಾಗಿ ಅವರು ತಮ್ಮ ಊರುಗೋಲಿನ ಸಹಾಯದಿಂದ ನಡೆದು ಬರುತ್ತಿರುವಾಗ ಅವರ ಫಿಸಿಯೋತೆರಪಿಸ್ಟ್ "ಗುರುಗಳೇ ಇಂದು ನನಗೆ ಅತ್ಯಂತ ಹರ್ಷವಾಗಿದೆ" ಎನ್ನಲು ಅವರು "ಇದು ನಿಮ್ಮ ಪ್ರಯತ್ನಗಳಿಂದ ಮಾತ್ರ ಸಾಧ್ಯವಾಯಿತು, ಧನ್ಯವಾದಗಳು" ಎಂದರು.

## ಡಿಸೆಂಬರ್ 12

ಡಿಸೆಂಬರ್ ತಿಂಗಳಲ್ಲಿ ಗುರುಗಳ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿತು. ಭಾನುವಾರ ಅವರು ಗಾಲ್ಫ್ ಗಾಡಿಯಲ್ಲಿ ಧ್ಯಾನಮಂದಿರಕ್ಕೆ ಆಗಮಿಸಿ ನಡೆದುಕೊಂಡೇ ವೇದಿಕೆಯ ಮೇಲೆ ಬಂದರು. ಅವರ ದೀರ್ಘ ಅನಾರೋಗ್ಯದ ನಂತರ ಮೊದಲ ಬಾರಿ ಅವರು ಈ ಹಾದಿಯಲ್ಲಿ ಧ್ಯಾನಮಂದಿರಕ್ಕೆ ಆಗಮಿಸಿದ್ದು. ಮೊದಲ ವಾರ ನಿರಂತರವಾಗಿ ಮಳೆಯಾಗುತ್ತಿದ್ದು, ಗುರುಗಳು ಕಾರಿನಲ್ಲಿ ಹೊಗಲು ಪ್ರಯತ್ನಿಸುವುದಾಗಿ ಬಯಸಿದರು. ಸಾಯಂಕಾಲದ ಅವರ ಫಿಸಿಯೋಥೆರಪಿಯ ಭಾಗವಾಗಿ ಗುರುಗಳು ಅವರ ಕೊಠಡಿಯಿಂದ ಪ್ರವೇಶದ್ವಾರಕ್ಕೆ ನಡೆಯುತ್ತಾ ಬಂದು ಕಾರಿನಲ್ಲಿ ಕುಳಿತು ಒಂದು ಸಣ್ಣ ಸುತ್ತಾಟ ನಡೆಸಿದರು. ಗುರುಗಳು ದೈಹಿಕವಾಗಿ ಗುಣಮುಖರಾಗುತ್ತಿದ್ದಾರೆಂಬುದಕ್ಕೆ ಇದೊಂದು ನಿಚ್ಚಳ ಸಾಕ್ಷಿ.

ಒಂದು ದಿನ ಸಾಯಂಕಾಲ ಗುರುಗಳು 'ದಿ ರಿವಿಲೇಶನ್ಸ್ ಆಫ್ ದಿ ಪಿರಮಿಡ್' ಎಂಬ ಸಾಕ್ಷ್ಯಚಿತ್ರವನ್ನು ವೀಕ್ಷಿಸಿದರು. ಇದು ಒಂದು ಉತ್ತಮ ಮಾಹಿತಿ ನೀಡುವ ಕಾರ್ಯಕ್ರಮವಾಗಿದ್ದು, ಶ್ರೇಷ್ಠವಾದ ಪಿರಮಿಡ್‌ಗಳು ಹಾಗು ವಿವಿಧ ರೀತಿಯ ಐತಿಹಾಸಿಕ ನಿರ್ಮಾಣಗಳ ಬಗ್ಗೆ ತಿಳಿಸಿತು. ಆ ಸಮಯದಲ್ಲಿ ಬಹಳಷ್ಟು ಚರ್ಚೆಗಳು ನಡೆದವು ಮತ್ತು ಗುರುಗಳು ಕಾಸ್ಮಿಕ್ ಕೆಲಸಕ್ಕೆ ಸಂಬಂಧಪಟ್ಟಂತೆ ಬದಲಾವಣೆಯು ಎಷ್ಟೊಂದು ಮುಖ್ಯ ಎಂಬುದರ ಬಗ್ಗೆ ಮಾತನಾಡಿದರು. ಒಬ್ಬರು ಪ್ರಕೃತಿ ವಿಕೋಪಗಳು ಸಂಭವಿಸಿದಾಗ ನಾವು ಏನು ಮಾಡಬೇಕೆಂದು ಕೇಳಿದಾಗ ಗುರುಗಳು "ಅಂತಹ ಸಮಯದಲ್ಲಿ ಅತ್ಯುತ್ತಮವಾದ ದಾರಿಯೆಂದರೆ ಧ್ಯಾನಿಸುತ್ತಿರುವುದು, ಆದ್ದರಿಂದ ಯಾವುದೇ ವಿಕೋಪಗಳು ಸಂಭವಿಸಿದರೂ ನಾವು ಎದುರಿಸಲು ಸಿದ್ಧರಾಗಬೇಕು" ಎಂದರು.

ಪ್ರಶಿಕ್ಷಕರಾಗುವ ಅಭ್ಯರ್ಥಿಗಳಿಬ್ಬರು ಬಂದರು ಮತ್ತು ಗುರುಗಳಿಗೆ ಅವರ ಪರಿಚಯ ಮಾಡಿಕೊಡಲಾಯಿತು. ಗುರುಗಳು ಹಾಸ್ಯಭರಿತರಾಗಿ "ನಾನೀಗ ಚೆನ್ನಾಗಿದ್ದೇನೆ. ಈ ಕೆಲಸಗಳನ್ನು ಮತ್ತೆ ಮಾಡಬೇಕಿದೆ" ಎಂದರು. ಗುರುಗಳು ಅನಾರೋಗ್ಯರಾಗಿದ್ದ ಕಾರಣ ಸಹೋದರ ಕಮಲೇಶರು ಪ್ರಶಿಕ್ಷಕರನ್ನು ಮಾಡುತ್ತಿದ್ದರು.

## ಗಾಯತ್ರಿಗೆ ಹಿಂದಿರುಗಿದ್ದು

ಐದೂವರೆ ತಿಂಗಳುಗಳ ನಂತರ ಗುರುಗಳು ಗಾಯಿತ್ರಿಗೆ ಹಿಂದಿರುಗಿದರು.ಮನೆಗೆ ಹಿಂದಿರುಗಿದ ನಂತರ ದಿನನಿತ್ಯದ ಕೆಲಸದಲ್ಲಿ ಅಂದರೆ ಬೈಠಕ್‌ಗಳು, ಆಡಳಿತಾತ್ಮಕ ಕೆಲಸಗಳು, ಭೇಟಿಯಾಗಲು ಬಂದವರನ್ನು ಎದುರುಗೊಳ್ಳುವುದು, ಅನೌಪಚಾರಿಕ ಚರ್ಚೆಗಳನ್ನು ನಡೆಸುವುದು ಮತ್ತಿತರ ಅನೇಕ ರೀತಿಯ ಕಾರ್ಯಗಳಲ್ಲಿ ನಿರತರಾದರು. ಮಧ್ಯಾಹ್ನದ ಊಟದ ನಂತರ ಊಟದ ಹತ್ತಿರ ಸುಮಾರು ಒಂದು ಗಂಟೆಗಳ ಮಾತನಾಡುತ್ತಿದ್ದರು. ಅವರ ಅತ್ಯಂತ ಅನಾರೋಗ್ಯದ ಸ್ಥಿತಿಯಲ್ಲಿ ಏನಾಗುತ್ತಿತ್ತೆಂಬ ಹಲವು ವಿಚಾರಗಳನ್ನು ಅವರು ನೆನಪಿಸಿಕೊಳ್ಳಲಾಗಲಿಲ್ಲ. ಮತ್ತು ಏನಾಯಿತೆಂದು ಅಭ್ಯಾಸಿಗಳಿಂದ ನೆನಪಿಸಿಕೊಂಡಿದ್ದಕ್ಕಾಗಿ ಆಶ್ಚರ್ಯ ವ್ಯಕ್ತಪಡಿಸಿದರು.

ಅವರು ಅನೌಪಚಾರಿಕ ಮಾತುಕತೆಯ ವೇಳೆಯಲ್ಲಿ ಅಸೂಯೆಯ ಬಗ್ಗೆ ಮಾತನಾಡಿದರು, ಬಹಳಷ್ಟು ಜನರು ಇವರ ಬಗ್ಗೆ ಮತ್ತು ಇವರು ಬಾಬೂಜಿವರೊಡನೆ ಹೊಂದಿದ್ದ ಆತ್ಮೀಯತೆಯ ಬಗ್ಗೆ ಅಸೂಯೆಯೆನ್ನು ಹೊಂದಿದ್ದರೆಂದು ಹೇಳಿದರು. ಸಹೋದರರೊಬ್ಬರು "ಅಸೂಯೆ ಸರಿಯೆ?" ಎಂದು ಕೇಳಿದರು. ಗುರುಗಳು ನಾನೂ ಈ ಪ್ರಶ್ನೆಯನ್ನು ಬಾಬೂಜಿ ಮಹಾರಾಜರಿಗೆ ಕೇಳಿದ್ದೆ, ಅವರು "ಇಲ್ಲ, ಅಸೂಯೆ ಅಥವಾ ಮತ್ಸರವನ್ನು ಹೊಂದಿರುವುದು ಕೆಟ್ಟದು" ಎಂದು ಹೇಳಿದರೆಂದು ತಿಳಿಸಿದರು. "ಅಸೂಯೆ ಎನ್ನುವುದು ಎಣೆಯಿಲ್ಲದ ಪಾಪ. ಮತ್ಸರದ ವ್ಯಕ್ತಿಗೆ ಯಾವುದೇ ತಿಳುವಳಿಕೆ





ನೀಡಲು ಸಾಧ್ಯವಿಲ್ಲ. ಅಸೂಯೆ ಎಂಬುದರ ಮೂಲ ಅರ್ಥ ಈಗಾಗಲೇ ಗುರುಗಳು ಮತ್ತೊಬ್ಬ ವ್ಯಕ್ತಿಗೆ ನೀಡಿರುವುದನ್ನು ನಿಮಗೆ ನೀಡುವುದರ ಗುರುಗಳ ಯೋಗ್ಯತೆಯನ್ನು ಪ್ರಶ್ನಿಸುವುದು ಎಂದಾಗುತ್ತದೆ."

### ಡಾ.ಇಚಾಕ್ ಅಡೀಜಸ್ ರ ಭೇಟಿ

ಸೋ.ಇಚಾಕ್ ಅಡೀಜಸ್ ರು ಡಿ.14 ರಿಂದ 16 ರವರೆಗಿನ 3 ದಿನಗಳ ಜಿಎಸ್‌ಟಿ ಕಾರ್ಯಕ್ರಮವನ್ನು ಆಯೋಜಿಸಲು ಆಗಮಿಸಿದ್ದರು. ಒಂದು ದಿನ ಸೋ.ಇಚಾಕ್‌ರು ಗುರುಗಳನ್ನು ಮಾನವ ಕುಲದ ಭವಿಷ್ಯದ ಬಗ್ಗೆ ಕೇಳಿದರು. ಗುರುಗಳು ಅದು ಚೆನ್ನಾಗಿರುತ್ತದೆಂದು ತಿಳಿಸಿದರು. ಸೋ.ಇಚಾಕ್‌ರು ಅಣುಶಕ್ತಿಯ, ವಿನಾಶದ ಬಗೆಗಿರುವ ಆತಂಕದ ಕುರಿತು ಕೇಳಲಾಗಿ ಗುರುಗಳು 'ಅದು ವಿನಾಶವಲ್ಲ, ಪ್ರಗತಿಗೆ ಇರುವ ಅಡೆತಡೆಗಳನ್ನು ನಿವಾರಿಸುವುದು' ಎಂದು ಪ್ರತಿಕ್ರಿಯಿಸಿದರು. ನಂತರ ವಿಚಾರವು ದೇವರು, ಗುರುಗಳು ಮತ್ತು ಯಾರಲ್ಲಿ ಶ್ರದ್ಧೆಯಿಡಬೇಕು ಎಂಬುದರ ಕಡೆ ಹರಿಯಿತು. ಗುರುಗಳು "ನಾನು ನನ್ನ ಗುರುಗಳಾದ ಬಾಬೂಜಿ ಮಹಾರಾಜರಲ್ಲಿ ಶ್ರದ್ಧೆಯಿಡುತ್ತೇನೆ ಮತ್ತು ದೇವರಲ್ಲಿ ಅಲ್ಲ. ಸಹಜ ಮಾರ್ಗದ ಪ್ರಕಾರ ದೇವರಿಗೆ ಮನಸಿಲ್ಲ ಮತ್ತು ಆತ ವಿಶ್ವವನ್ನು ಸೃಷ್ಟಿಸಿದ್ದಾನೆ ಮತ್ತು ಆ ಸೃಷ್ಟಿಯೊಂದಿಗೆ ಆತನ ಪಾತ್ರ ಮುಗಿಯಿತು." ಗುರುಗಳು ನಂತರ "ನಮ್ಮ ಗಂತವ್ಯದೆಡೆಗೆ ಮಾರ್ಗದರ್ಶಿಸುವ ಅಸ್ತಿತ್ವವು ತಾನೇ ತಾನಾಗಿ ಕಾರ್ಯ ಮಾಡಲು ಸಾಧ್ಯವಿಲ್ಲ. ಗುರುಗಳ ಹಾಗೆ ಭೂಮಿಯ ಮೇಲೆ ಅದಕ್ಕೊಂದು ಮಾಧ್ಯಮದ ಅಗತ್ಯವಿದೆ, ಅವರ ಮೂಲಕ ಅದು ಕಾರ್ಯ ನಿರ್ವಹಿಸುತ್ತದೆ" ಎಂದರು. ಸಹೋದರ ಇಚಾಕ್‌ರು "ಪ್ರೇಮದಲ್ಲಿ ಭಯವೇಕಿದೆ" ಎಂದು ಕೇಳಿದರು. ಗುರುಗಳು "ಇದಕ್ಕಿರುವ ಒಂದೇ ಒಂದು ಕಾರಣವೆಂದರೆ ನಾವು ನೀಡದಿರುವುದು. ನೀಡುವುದು ಮತ್ತು ನೀಡುತ್ತಲೇ ಇರುವುದರಿಂದ ಭಯವು ದೂರವಾಗುತ್ತದೆ. ಅವರು ಜೊತೆಗೆ 'ನೀಡಿ ಮತ್ತು ನೀವು ನೀಡಲು ಹೆಚ್ಚು ಪಡೆಯುತ್ತೀರಿ." ಇದಕ್ಕೆ ನಾನು ಖಾತರಿ ನೀಡಬಲ್ಲೆ' ಎಂದರು.

ಡಿಸೆಂಬರ್ 16ರಂದು ಗುರುಗಳು ಅವರನ್ನು ಕಾಣಲು ಅವರ ಮನೆಯ ಹತ್ತಿರ ಕಾಯುತ್ತಿದ್ದ ಜಾರ್ಖಂಡ್ ಅಭ್ಯಾಸಿಗಳನ್ನು ಭೇಟಿ ಮಾಡಿದರು. ನಂತರ ಆಶ್ರಮದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಮತ್ತು ಡಾ.ಇಚಾಕ್ ಅಡೀಜಸ್‌ರ ಕಾರ್ಯಕ್ರಮಕ್ಕೂ ಹಾಜರಾದರು. ಪ್ರಶಿಕ್ಷಕರ ಕಾರ್ಯವನ್ನು ಉಲ್ಲೇಖಿಸಿ, ಅವರಿಗೆ ವಹಿಸಿರುವ ಒಂದು ಅಭ್ಯಾಸಿ ಗುಂಪಿನ ಆಧ್ಯಾತ್ಮಿಕ ಪ್ರಯಾಣದ ಮೇಲ್ವಿಚಾರಕರಾಗುವ ಸೌಭಾಗ್ಯ ಅವರದಾಗಿರುತ್ತದೆ ಎಂದು ಹೇಳಿದರು. "ಪ್ರಶಿಕ್ಷಕರು ಅಭ್ಯಾಸಿಗಳನ್ನು ರಕ್ಷಿಸಲು ಕೆಳಗಿಳಿಯಲು, ನರಕಕ್ಕಾದರೂ ಸರಿಯೇ, ಸಿದ್ಧರಾಗಿರಬೇಕು" ಎಂದರು. ಅವರು ಕಾರ್ಯಕ್ರಮವನ್ನು ಗಮನಿಸಿದರು.

ಡಿಸೆಂಬರ್ 23ರ ಭಾನುವಾರ 8 ಮದುವೆಗಳನ್ನು ಗಾಯತ್ರಿಯಲ್ಲಿ ನಡೆಸಿದರು. ಕ್ರಿಸ್ಮಸ್ ದಿನ ಆಶ್ರಮದಲ್ಲಿ ಸತ್ಸಂಗವನ್ನು ನಡೆಸಿ ಅಭ್ಯಾಸಿಗಳಿಗೆ ಆಶ್ಚರ್ಯವನ್ನುಂಟು ಮಾಡಿದರು. ಸತ್ಸಂಗದ ನಂತರ ಎಂದಿನಂತೆ ಕುಟೀರದ ನವೀಕರಣ ಕಾರ್ಯವನ್ನು ಪರಿಶೀಲಿಸಿದರು. ನಂತರ ಸಭಾಂಗಣ ವಿಭಾಗಕ್ಕೆ ತೆರಳಿದರು. ಅವರು ವಿದೇಶದ ಬಹಳಷ್ಟು ಅಭ್ಯಾಸಿಗಳನ್ನು ಹಾಗು ಕ್ರೈಸ್ತ ಹಿನ್ನೆಲೆಯಿಂದ ಬಂದಿರುವ ಅನೇಕ ಭಾರತೀಯ ಅಭ್ಯಾಸಿಗಳನ್ನು ಆಹ್ವಾನಿಸಿ, ಕಾಣಿಕೆಗಳನ್ನು ನೀಡಿದರು.

ಡಿಸೆಂಬರ್ 29 ರ ಶನಿವಾರ ನಿರಂತರವಾಗಿ ಮಳೆಯಾಗುತ್ತಿತ್ತು. ಆದರೂ ಗುರುಗಳು ಅಹಿತ ಹವಾಮಾನವನ್ನು ಗಣನೆಗೆ ತೆಗೆದುಕೊಳ್ಳದೆ ಒಂದು ಗಂಟೆ ಸತ್ಸಂಗವನ್ನು ನಡೆಸಿ ಕೂಡಲೇ ಗಾಯಿತ್ರಿಗೆ ಹೊರಟರು. ಸಾಯಂಕಾಲ ಗಾಯಿತ್ರಿಯಲ್ಲಿ ಸತ್ಸಂಗದ ನಂತರ ಕೆಲವು ಅಭ್ಯಾಸಿಗಳಿಂದ ಕಾಣಿಕೆಗಳನ್ನು ಸ್ವೀಕರಿಸಿದರು. ಸೋ.ಅಲ್ಲಾ ಮತ್ತು ಸೋ.ಇಗೊರ್‌ರವರು ಕ್ಯಾಲಿಫೋರ್ನಿಯಾದಲ್ಲಿರುವ ಸಿಕ್ವಿಯಾ ಎಂಬ ಪ್ರಪಂಚದ ಎರಡನೆ ಅತಿ ಎತ್ತರದ ಮರದ ಭಾವಚಿತ್ರವನ್ನು ತಂದಿದ್ದರು ಹಾಗು ಅವರು ಆ ಮರವು ಹಳತಾಗುತ್ತಿದ್ದಂತೆ ಹೆಚ್ಚು ಬಲಯುತವಾಗುತ್ತಿರುವುದನ್ನು ಗುರುಗಳಿಗೆ ವಿವರಿಸಿದರು. ಈ ರೀತಿಯಲ್ಲಿಯೇ ಗುರುಗಳೂ ಹೆಚ್ಚು ಬಲಯುತರಾಗಿ ಬೆಳೆಯಲೆಂದು ಆಶಿಸಿದರು. ನಂತರ ಅವರು ಕೆಲವು ಚಳಿಗಾಲದ ಬಟ್ಟೆಗಳನ್ನು ಗುರುಗಳಿಗೆ ನೀಡುತ್ತಾ ಅವರು ಬಲಯುತರಾಗುತ್ತಿರುವುದರಿಂದ ರಷ್ಯಾ ಮತ್ತು ಸರ್ಬ್ಯೂಲ್‌ಗಳಿಗೆ ಪ್ರಯಾಣ ಮಾಡಲು ಚಳಿಗಾಲದ ಬಟ್ಟೆಗಳ ಅಗತ್ಯವಿದೆಯೆಂದು ಹೇಳಿದರು.ಗುರುಗಳು ನಗುತ್ತಾ ಕೃಪಾಪೂರ್ಣರಾಗಿ ಈ ಕಾಣಿಕೆಗಳನ್ನು ಸ್ವೀಕರಿಸಿದರು.

ಡಿಸೆಂಬರ್ 3 ರ ರಾತ್ರಿ ಮಲಗಲು ಹೋಗುವ ಮುಂಚೆ ಅಭ್ಯಾಸಿಯೊಬ್ಬರು ಗುರುಗಳಿಗೆ, "ಗುರುಗಳೇ, ಈ ವರ್ಷ ನಮಗೆ ದೊರೆತ ಶ್ರೇಷ್ಠವಾದ ಕಾಣಿಕೆಯೆಂದರೆ ನೀವು ಅತ್ಯಂತ ಪ್ರಬಲ ಅನಾರೋಗ್ಯವನ್ನು ಎದುರಿಸಿ ಆರೋಗ್ಯಪೂರ್ಣರಾಗಿ ನಮ್ಮೆಡೆಗೆ ಹಿಂದಿರುಗಿದ್ದು" ಎಂದು ಹೇಳಿದರು. ಗುರುಗಳು ಉತ್ತರಿಸುತ್ತಾ "ನಾನು ಹೊಂದಿರುವ ಅತ್ಯುತ್ತಮ ಕಾಣಿಕೆಯೆಂದರೆ ನೀವೆಲ್ಲರೂ ನನ್ನೊಂದಿಗಿರುವುದು" ಎಂದರು. ಅದು ಬಹಳ ಹೃದಯಸ್ಪರ್ಶಿ ಕ್ಷಣವಾಗಿದ್ದು ನಿಶ್ಶಬ್ದವು ಮುಂದುವರೆಯಿತು. ಗುರುಗಳು ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಹೇಳಿ ಮಲಗಲು ತೆರಳಿದರು.





# ಮಣಪಾಕ್ಕಂನಲ್ಲಿ ವಿಚಾರಸಂಕಿರಣಗಳು

## ಅಕ್ಟೋಬರ್ 16–21, 2012

ಗೋರಖ್‌ಪುರದಿಂದ ಸುಮಾರು 250 ಅಭ್ಯಾಸಿಗಳು ಮತ್ತು ಪಂಜಾಬ್, ಹರಿಯಾಣ ಮತ್ತು ಚಂಡೀಗಢದಲ್ಲಿನ ಕೇಂದ್ರಗಳ ಸುಮಾರು 400 ಅಭ್ಯಾಸಿಗಳು ವಿಚಾರಸಂಕಿರಣದಲ್ಲಿ ಉಪಸ್ಥಿತರಿದ್ದರು.

## ಅಕ್ಟೋಬರ್ 23–28, 2012

ನೊಯ್ಡಾ ಮತ್ತು ಫೈರೂಖಾಬಾದ್, ಫರೀದಾಬಾದ್, ಅಲಿಗಢ, ರಾಮ್‌ಪುರ, ಮತ್ತು ಚಿಕ್ಕಿಗಳಂತಹ ಅನೇಕ ಕೇಂದ್ರಗಳಿಂದ ಸುಮಾರು 200 ಅಭ್ಯಾಸಿಗಳು ಬಂದಿದ್ದರು. ಒಟ್ಟಾರೆ, ಅಲ್ಲಿ ಸತ್ಸಂಗಗಳಲ್ಲಿ ಮತ್ತು ಗುಂಪಿನಲ್ಲಿ ವಿಚಾರವಿನಿಮಯಗಳು, ಸಭೆಗಳು ಇತ್ಯಾದಿಗಳಲ್ಲಿ ಸುಮಾರು 500 ಅಭ್ಯಾಸಿಗಳು ಭಾಗವಹಿಸಿದ್ದರು.

## ಅಕ್ಟೋಬರ್ 30ರಿಂದ ನವೆಂಬರ್ 4, 2012

ವಿಚಾರಸಂಕಿರಣಕ್ಕೆಂದು ಬೆಂಗಳೂರಿನಿಂದ ಸುಮಾರು 1300 ಅಭ್ಯಾಸಿಗಳು ಬಂದಿದ್ದರು.ಮೊದಲದಿನ ಸೋ.ಕಮಲೇಶ್ ಮಾತನಾಡಿದರು. ಉಳಿದ ದಿನಗಳಲ್ಲಿ ಭಾಷಣಗಳು ಮತ್ತು ತದನಂತರ ಸಾಯಂಕಾಲಗಳಲ್ಲಿ ಡಿ.ವಿ.ಡಿ. ಪ್ರದರ್ಶನಗಳಿದ್ದವು. ಪ್ರಶಿಕ್ಷಕರುಗಳಿಗಾಗಿ ವಿಶೇಷ ಅಧಿವೇಶನಗಳನ್ನೂ ನಡೆಸಲಾಗಿತ್ತು.

## ನವೆಂಬರ್ 6–11, 2012

ವಿರುಧನಗರ, ಅಲುವಾ ಮತ್ತಿತರ ಉಪಕೇಂದ್ರಗಳು, ನಾಗಪುರ ಮತ್ತು ಬರೇಲಿಗಳಿಂದ ಅಭ್ಯಾಸಿಗಳು ವಿಚಾರಸಂಕಿರಣಕ್ಕೆಂದು ಬಂದಿದ್ದರು. ನಾಗಪುರದಿಂದ ಬಂದ ಮಕ್ಕಳ ಗುಂಪೊಂದು ಆಶ್ರಮವನ್ನು ಕಳೆಗಟ್ಟಿಸಿತ್ತು. ಒಟ್ಟಿಗೆ ಸುಮಾರು 500 ಅಭ್ಯಾಸಿಗಳು ಈ ವಾರಕ್ಕೆಂದು ಬಂದಿದ್ದರು.

## ನವೆಂಬರ್ 12–18, 2012

ದೀಪಾವಳಿಯ ಈ ವಾರ ಗುಜರಾತ್‌ನ ಸುಮಾರು 1200 ಅಭ್ಯಾಸಿಗಳು ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದರು. ಗುರುಗಳ ಆರೋಗ್ಯವು ಸುಧಾರಿಸಿದ್ದು ಅವರು ಮಂಗಳವಾರ ಮತ್ತು ಬುಧವಾರಗಳಂದು ಆಶ್ರಮಕ್ಕೆ ಬಂದು ಸತ್ಸಂಗಗಳನ್ನು ನಡೆಸಿಕೊಟ್ಟರು, ಅನೇಕ ಅಭ್ಯಾಸಿಗಳು, ಮಕ್ಕಳನ್ನು ಭೇಟಿಯಾದರು. ಅವರ ಸಾನ್ನಿಧ್ಯದ ಅನುಭವವನ್ನು ಪ್ರತಿಯೊಬ್ಬರೂ ಆನಂದಿಸಿದರು.

## ನವೆಂಬರ್ 20–25, 2012

ಆಂಧ್ರಪ್ರದೇಶದ ಕರೀಂ ನಗರ ಜಿಲ್ಲೆ ಮತ್ತು ತಿರುಪತಿ, ಗೋದಾವರಿಖಾನಿಯ ಪೆದ್ದಪಲ್ಲಿ, ಜಾಮ್ಮಿಕುಂಟ, ಮಂಚೇರಿಯಲ್, ಜೈಪುರಂ, ಶ್ರೀರಾಮ್‌ಪುರ, ಮಂದಮರ್‍ರಿ, ಬೆಲ್ಲಂಪಲ್ಲಿ, ಗೋಲೇಟಿ, ಆಸೀಫಾಬಾದ್, ಸಿರ್‌ಪುರ್ ಮುಂತಾದೆಡೆಗಳಿಂದ ಮತ್ತು ಬಳ್ಳಾರಿ, ಕಂಪ್ಲಿ–ಕೊಟ್ಟಲ್ ಮತ್ತು ಗಂಗಾವತಿಗಳಿಂದ ಬಂದ ಒಟ್ಟು ಸುಮಾರು 700 ಅಭ್ಯಾಸಿಗಳು ಈ ವಿಚಾರಸಂಕಿರಣದಲ್ಲಿ ಭಾಗವಹಿಸಿದರು.

## ನವೆಂಬರ್ 27ರಿಂದ ಡಿಸೆಂಬರ್ 2, 2012

ಸಿಂಗಾಪುರ, ಮಲೇಶ್ಯಾ, ಇಂಡೋನೇಶ್ಯಾ, ಫಿಲಿಪೀನ್ಸ್, ಥಾಯ್‌ಲ್ಯಾಂಡ್ ಮತ್ತು ಜಪಾನ್‌ಗಳಿಂದ 150 ಅಭ್ಯಾಸಿಗಳು ಆಗಮಿಸಿದ್ದರು. ಗುರುಗಳು ಈ ವಿಚಾರಗೋಷ್ಠಿಯು ಸರಿಯಾಗಿ ನಡೆಯುವಂತೆ ಮತ್ತು ಕಾರ್ಯಕ್ರಮಪಟ್ಟಿಯನ್ನು ಪರಿಣಾಮಕಾರಿಯಾಗಿ ಏರ್ಪಡಿಸುವಂತೆ ವಿಶೇಷ ಆಸಕ್ತಿ ವಹಿಸಿದ್ದರು. ಗುರುಗಳು ಎಲ್ಲ ಪ್ರಶಿಕ್ಷಕರುಗಳನ್ನು ಸೋ.ಮಾಧವರ ಮನೆಗೆ ಆಮಂತ್ರಿಸಿದರು ಮತ್ತು ಅವರಿಗೆ ಸುದೀರ್ಘವಾದ ಭಾಷಣವೊಂದನ್ನು ಮಾಡಿ ಆನಂತರ ಒಂದು ಬೈಠಕ್ ನೀಡಿದರು. ಭವ್ಯ ಸಮಾರೋಪವಾಗಿ, ರವಿವಾರದಂದು ಗುರುಗಳು ಗಾಲ್ಫ್ ಗಾಡಿಯಲ್ಲಿ ಆಶ್ರಮಕ್ಕೆ ಆಗಮಿಸಿ ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟರು.

## ಡಿಸೆಂಬರ್ 4–9, 2012

ಸುಮಾರು 750 ಅಭ್ಯಾಸಿಗಳಿದ್ದ ದೊಡ್ಡ ಗುಂಪೊಂದು ಮುಖ್ಯವಾಗಿ ಆಗ್ರಾ ಮತ್ತು ಸಮೀಪದ ಕೇಂದ್ರಗಳಾದ ರಾಯ್‌ಬರೇಲಿ, ಚಂದ್ರಾಪುರ, ಫತೇಪುರ ಮತ್ತು ಇಟಾಗಳಿಂದ ಬಂದಿತ್ತು. ಗುರುಗಳು ಗಾಯತ್ರಿಯಲ್ಲಿದ್ದರು ಮತ್ತು ತಾನು ಗಾಯತ್ರಿಯಲ್ಲಿರುವುದು ವಿಶ್ರಾಂತಿ ಮತ್ತು ಆರೋಗ್ಯಸುಧಾರಣೆಗಾಗಿ ಎಂದು ಒತ್ತಿಹೇಳುತ್ತಲೇ ಬಂದಿದ್ದರು. ವಿಚಾರಸಂಕಿರಣವು ಎಂದಿನಂತೆ ಎಲ್ಲ ಸತ್ಸಂಗಗಳೊಡನೆ ಮುಂದುವರೆದಿತ್ತು ಮತ್ತು ಸೋ.ಕಮಲೇಶ್ ಅವರು ಸತ್ಸಂಗಗಳು, ಸಭೆಗಳು ಇತ್ಯಾದಿಗಳಲ್ಲಿ ಪಾಲ್ಗೊಳ್ಳುತ್ತ ಸಕ್ರಿಯ ಪಾತ್ರವನ್ನು ನಿರ್ವಹಿಸಿದರು.

## ಡಿಸೆಂಬರ್ 11–16, 2012

ಬಿಹಾರ ಮತ್ತು ಜಾರ್ಖಂಡಗಳಿಂದ ದೊಡ್ಡ ಸಂಖ್ಯೆಯ ಅಭ್ಯಾಸಿಗಳು ಮಣಪಾಕ್ಕಂಗೆ ಬರಲು ತುಂಬ ಪರಿಶ್ರಮ ಪಟ್ಟಿದ್ದರು ಮತ್ತು ಒಟ್ಟು ಸುಮಾರು 750 ಮಂದಿ ಅಭ್ಯಾಸಿಗಳು ಬಂದಿದ್ದರು. ಗುರುಗಳು ಗಾಯತ್ರಿಯಲ್ಲಿ ಆದಷ್ಟು ಮಂದಿಯನ್ನು ಭೇಟಿಯಾಗಲು ಪ್ರಯತ್ನಿಸಿದರು. ಮತ್ತು ಡಿಸೆಂಬರ್ 16 ರಂದು ರವಿವಾರ ಅವರು ಆಶ್ರಮಕ್ಕೆ ಬಂದು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟು ಎಲ್ಲರಿಗೂ ಸಂತೋಷಾಶ್ಚರ್ಯವನ್ನುಂಟುಮಾಡಿದರು.

## ಡಿಸೆಂಬರ್ 18–23, 2012

ಆಂಧ್ರಪ್ರದೇಶದ ಅಮಲಾಪುರಂ, ಗುಂಟೂರು, ಮತ್ತು ಕಡಪದಿಂದ ಒಟ್ಟು 600 ಮತ್ತು ಕರ್ನಾಟಕದ ರಾಯಚೂರಿನಿಂದ 25 ಅಭ್ಯಾಸಿಗಳು ವಿಚಾರಸಂಕಿರಣದಲ್ಲಿ ಭಾಗವಹಿಸಿದರು.ನಿಯತವಾಗಿ ಏರ್ಪಟ್ಟಿದ್ದ ಸತ್ಸಂಗಗಳಲ್ಲದೆ ಅಲ್ಲಿ 'ಪರಿಶುದ್ಧತೆ', 'ಸಂಸ್ಕಾರಗಳು', 'ಗುರುವಿನ ಪಾತ್ರ', 'ಧರ್ಮ ಮತ್ತು ಅಧ್ಯಾತ್ಮ' ಇವೇ ವಿಷಯಗಳ ಮೇಲೆ ಭಾಷಣಗಳಿದ್ದವಲ್ಲದೆ ಒಂದು ಪ್ರಶಿಕ್ಷಕರ ಸಭೆಯೂ ಇತ್ತು. ಡಿಸೆಂಬರ್ 23 ರಂದು ಸೋ.ಕಮಲೇಶ್ ಅವರು ಸತ್ಸಂಗವನ್ನು ನಡೆಸಿಕೊಟ್ಟರೆ ಗುರುಗಳು ಅದೇ ದಿನ ಗಾಯತ್ರಿಯಲ್ಲಿ 8 ಮದುವೆಗಳನ್ನು ನೆರವೇರಿಸಿದರು.

## ಡಿಸೆಂಬರ್ 25–30, 2012

ಈ ವಾರದ ವಿಶೇಷತೆಯೆಂದರೆ ಶ್ರೀಲಂಕೆಯಿಂದ ಸುಮಾರು 40 ಮಂದಿ ಅಭ್ಯಾಸಿಗಳು ಬಂದಿದ್ದು ಅವರು ತಮಿಳಿನಲ್ಲಿ ನಡೆದ ಎರಡು ದಿನಗಳ 'ಅಭ್ಯಾಸದ ತಳಹದಿ' ಕಾರ್ಯಕ್ರಮದಲ್ಲೂ ಭಾಗವಹಿಸಿದರು. ಗಮನಾರ್ಹ ಅಂಶವೆಂದರೆ, ದೂರದಿಂದ ಬಂದಿದ್ದ ಅಭ್ಯಾಸಿಗಳನ್ನು ಭೇಟಿಯಾಗಲೆಂದಷ್ಟೇ ಗುರುಗಳು ಬಂದಾಗ ಅವರ ಸಾನ್ನಿಧ್ಯವು ಕ್ರಿಸ್‌ಮಸ್ ಹಾಗೂ ಶನಿವಾರದಂದು ಆಶ್ರಮದಲ್ಲಿ ಲಭ್ಯವಾಗಿತ್ತು. ಜಮ್ಮು ಮತ್ತು ಕಾಶ್ಮೀರಗಳಿಂದ ಸುಮಾರು 80 ಅಭ್ಯಾಸಿಗಳು ಬಂದಿದ್ದರು ಮತ್ತು ಅವರಲ್ಲಿ ಅನೇಕರು ಮೊದಲಬಾರಿ ಬಂದಿದ್ದು, ಗುರುಗಳನ್ನು ಭೇಟಿಯಾಗಲು ಆಗಿತ್ತು. ಇದರ ಹೊರತಾಗಿ, ಉತ್ತರಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಹಿಮಾಚಲಪ್ರದೇಶಗಳ ಅನೇಕ ಕೇಂದ್ರಗಳಿಂದಲೂ ಅಭ್ಯಾಸಿಗಳು ಬಂದಿದ್ದು ಒಟ್ಟು ಸುಮಾರು 950 ಮಂದಿಯಿದ್ದರು.

# ಯುವ ಜಾಗೃತಿ

## ಸಹಜಮಾರ್ಗದಲ್ಲಿ ಯುವಜನತೆಯ ಪಾತ್ರ, ಪನ್ವೇಲ್ ಆಶ್ರಮ, ಮುಂಬಯಿ



ಪನ್ವೇಲ್ ಆಶ್ರಮದಲ್ಲಿ ಸೋ. ಮೋಹನದಾಸ್ ಹೆಗ್ಡೆಯವರು ಅಕ್ಟೋಬರ್ 6 ರಂದು ಕಾರ್ಯಕ್ರಮವೊಂದನ್ನು ನಡೆಸಿಕೊಟ್ಟಿದ್ದು ಸುಮಾರು 40 ಮಂದಿ ಭಾಗವಹಿಸಿದ್ದರು. ಇದರ ಉದ್ದೇಶಗಳು ಸದ್ಗುರು, ಸಂಸ್ಥೆ ಮತ್ತು ಸಾಧನಾ ಪದ್ಧತಿಗಳನ್ನು ಅರ್ಥಮಾಡಿಕೊಳ್ಳುವುದು, ಮಿಷನ್‌ನ ಚಟುವಟಿಕೆಗಳಲ್ಲಿ ಯುವಜನತೆ ಉತ್ಸಾಹವನ್ನು ಬೆಳೆಸಿಕೊಳ್ಳುವಂತೆ ಅವರನ್ನು ಪ್ರೇರೇಪಿಸುವುದು ಮತ್ತು ಏಕತೆಯ ಭಾವನೆಯನ್ನು ಬೆಳೆಸಿಕೊಳ್ಳುವುದು ಆಗಿದ್ದವು.

'ಸಾಧನೆಯ ಪರಿಕಲ್ಪನೆ'ಯ ಮೇಲಿನ ಒಂದು ಚರ್ಚೆಯು ಸಾಧನೆಯ ಬಗ್ಗೆ ಯಾವ ಮನೋಭಾವ ಇರಬೇಕು ಮತ್ತು 'ಆಧ್ಯಾತ್ಮಮುಖೀ ಪ್ರಾಪಂಚಿಕ ಜೀವನ'ವನ್ನು ಸಾಗಿಸುವುದು ಹೇಗೆ ಎಂಬುದರ ಬಗ್ಗೆ ಒತ್ತುಕೊಟ್ಟಿತ್ತು. 'ಅಭ್ಯಾಸದ ಪರಿಕಲ್ಪನೆ'ಯ ವಿಷಯವು ವರ್ತಮಾನದಲ್ಲಿ ಬದುಕುವ ಮನೋಭಾವದ ಮೇಲೆ ಬೆಳಕು ಚೆಲ್ಲಿತು. 'ಸ್ವಯಂಸೇವಕನ ಗುಣಗಳು' ಎಂಬ ವಿಷಯವು ಶರಣಾಗತಿ, ತಾಳ್ಮೆ, ಸಹನೆ ಮತ್ತು ವಿಧೇಯತೆಗಳು ಸ್ವಯಂಸೇವೆಯಲ್ಲಿ ಲಾಭದಾಯಕ ಮನೋಭಾವಗಳಾಗಿವೆ ಎಂಬುದನ್ನು ಹೊರಗೆಡಹಿತು. 'ಗುರುದೇವ ನಮ್ಮ ಆದರ್ಶ ಪಾತ್ರ' ಎಂಬ ವಿಷಯವು ಅಭ್ಯಾಸಿಗಳನ್ನು, ನಮಗೆ ಸದ್ಗುರುಗಳು ಹೇಗೆ ಮುಖ್ಯವಾಗುತ್ತಾರೆ ಎಂಬುದರ ಬಗ್ಗೆ ಚಿಂತನೆ ನಡೆಸುವಂತೆ ಪ್ರೇರಿಸಿತ್ತು. ಮತ್ತು 'ಆಧ್ಯಾತ್ಮಿಕ ಅಭಿವೃದ್ಧಿಯ ಮೂಲವಾಗಿ ಚಾರಿತ್ರ್ಯದ ಪರಿಕಲ್ಪನೆ' ಎಂಬ ವಿಷಯವು ಆಧ್ಯಾತ್ಮಿಕತೆಯ ಅಡಿಪಾಯವಾಗಿ ನೈತಿಕ ಮೌಲ್ಯಗಳ ಪ್ರಾಮುಖ್ಯತೆಯನ್ನು ಕುರಿತಾಗಿತ್ತು. ಕೊನೆಯಲ್ಲಿ 'ಸಹಜಮಾರ್ಗದ ಹತ್ತು ನಿಯಮಗಳ ಮಹತ್ವದ' ಬಗೆಗಿನ ಎಂಬ ಪ್ರಾಯೋಗಿಕ ಅಧಿವೇಶನವು ಕಾರ್ಯಾಗಾರವನ್ನು ಮುಕ್ತಾಯಗೊಳಿಸಿದಾಗ ಭಾಗವಹಿಸಿದವರು ಮೂರು ಒಗಳ ಬಗೆಗೆ ಉತ್ತಮ ಹಿಡಿತವನ್ನು ಸಾಧಿಸಿದಂತಿತ್ತು.

## ಸಹಜಮಾರ್ಗ ಯುವ ಮಂಡಲ, ತಿರುಪ್ಪೂರ

ತಿರುಪ್ಪೂರ ಕೇಂದ್ರದಲ್ಲಿ, ಯುವಕರು ನಿಯತವಾಗಿ ಧ್ಯಾನಮಂದಿರದಲ್ಲಿ ಒಟ್ಟುಸೇರುತ್ತಾರೆ ಮತ್ತು ಸ್ವಯಂಸೇವೆಯ ಬಗ್ಗೆ ತಮ್ಮ ವಿಚಾರ ಮತ್ತು ಅಭಿಪ್ರಾಯಗಳನ್ನುಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಗುರುಗಳ ಅನುಮತಿಯೊಂದಿಗೆ ಅಕ್ಟೋಬರ್ 29ರಂದು 'ಸಹಜಮಾರ್ಗ ಯುವ ಮಂಡಲ'ದ ರಚನೆಯಾಗಿದ್ದು ಇದು ಕ್ರೀಡಾ ಚಟುವಟಿಕೆಗಳನ್ನೂ ಒಳಗೊಂಡಿರುವುದು.ನವೆಂಬರ್ 4ರಂದು ಉದ್ಘಾಟನಾ ವಿಚಾರಗೋಷ್ಠಿಯು ಕಾಂಗೇಯಂ ನಲ್ಲಿ ನಡೆಯಿತು.ಸೋ.ಎನ್. ಪ್ರಕಾಶ್ ಅವರು ಉದ್ಘಾಟನಾ ಭಾಷಣವನ್ನು ಮಾಡಿದರು.ಸೋ.ಎಸ್.ಎಸ್. ರಾಮಕೃಷ್ಣನ್, ಸೋ.ರವಿ ಸುಬ್ಬಯ್ಯ ಮತ್ತು ಸೋ. ಯೆಳಯರಸಿಯವರು ಗುರುಸ್ಮರಣೆಯಲ್ಲಿ ಮಿಷನ್‌ನ ಸೇವೆ ಮಾಡಲು ಯುವಜನತೆಯನ್ನು ಪ್ರೋತ್ಸಾಹಿಸಿದರು.

ನವೆಂಬರ್ 11ರಿಂದ 13ರ ವರೆಗೆ ಮಂಡಲದ 25 ಮಂದಿ ಸದಸ್ಯರು ನೇಟ್ರಂಪಲ್ಲಿ ಆಶ್ರಮದಲ್ಲಿ ಒಂದು ಆಧ್ಯಾತ್ಮಿಕ ಸಭೆ ಮತ್ತು ಸ್ವಯಂಸೇವೆಯಲ್ಲಿ ಭಾಗವಹಿಸಿದರು. ನೈರ್ಮಲ್ಯದ ಕೆಲಸವಲ್ಲದೆ ಅವರು ಸತ್ಸಂಗಗಳ ಜೊತೆಗೆ ಪುಸ್ತಕ ಪಠನ, ಗುಂಪು ಚರ್ಚೆ, ಪ್ರಶ್ನೋತ್ತರ, ಮತ್ತು ನಿರ್ದಿಷ್ಟ ವಿಷಯಗಳ ಮೇಲೆ ಗುರುಗಳ ಭಾಷಣಗಳು ಮತ್ತು ಡಿ.ವಿ.ಡಿ. ಪ್ರದರ್ಶನಗಳಲ್ಲಿ ಭಾಗವಹಿಸಿದರು. ಕಾರ್ಯಕ್ರಮವು ಖುಷಿ ಮತ್ತು ಉತ್ಸಾಹಗಳೊಂದಿಗೆ ಸಂಪೂರ್ಣಗೊಂಡಿತು.

## ವಡೋದರದ ಯುವಜನತೆಗೆ 'ತಾಳ್ಮೆ'ಯ ಮೇಲೆ ಕಾರ್ಯಾಗಾರ

ಡಿಸೆಂಬರ್ 16ರಂದು ಸೋ. ಎಲಿಝಬೆತ್ ಡೇನ್ಲಿಯವರು ಬರೋಡ, ಆನಂದ್ ಮತ್ತು ನದಿಯಾಡ್‌ನ ಯುವಜನತೆಗೆ 'ತಾಳ್ಮೆ' ಎಂಬ ವಿಷಯದಲ್ಲಿ ಕಾರ್ಯಕ್ರಮ ನಡೆಸಿದರು. ಅದು 'ಅಭ್ಯಾಸವನ್ನು ತಳಹದಿ'ಯ ಒಂದು ಘಟಕವಾಗಿತ್ತು. ಬರೋಡ ಕೇಂದ್ರದಿಂದ ಐವರು ಸೌಲಭ್ಯಕಾರರು ಮತ್ತು ಸೋ.ಎಲಿಝಬೆತ್ ಅವರು ಎರಡು ಗಂಟೆಗಳಕಾಲ ಸಹನೆ ಮತ್ತು ತಾಳ್ಮೆಯ ಮೇಲೆ ಕೇಂದ್ರೀಕೃತವಾದ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅದು ಆಲಿಸುವುದು ಮತ್ತು ಮಾತನಾಡುವುದು ಎಂಬ ವಿಷಯದಿಂದ ಆರಂಭವಾಯಿತು. ಹೃದಯದಿಂದ ಆಲಿಸುವುದು ಮತ್ತು ಮಾತಾಡುವುದು ಎಂಬುದರ ಮೇಲೆ ಗುರುಗಳ ಭಾಷಣಗಳ ಉದ್ಧೃತ ಭಾಗಗಳನ್ನು ಓದಲಾಯಿತು. ಸುಮಾರು 60 ಅಭ್ಯಾಸಿಗಳನ್ನು ಗುಂಪುಗಳಾಗಿ ವಿಂಗಡಿಸಲಾಯಿತು. ಪ್ರತಿಯೊಂದು ಗುಂಪಿನ ಸದಸ್ಯರಿಗೂ ಸಹಾಯ ಮತ್ತು ಮಾರ್ಗದರ್ಶನ ಮಾಡಲು ಓರ್ವ ಸೌಲಭ್ಯಕಾರರಿದ್ದರು.

ಭಾಗವಹಿಸಿದವರನ್ನು ಇಬ್ಬಿಬ್ಬರನ್ನಾಗಿ ಗುಂಪುಗಳಾಗಿ ಮಾಡಿ, ಪ್ರತಿಯೊಬ್ಬರೂ, ತಾವು ಬೇರೆಯವರೊಂದಿಗೆ ತಾಳ್ಮೆಗೇಡಿತನ ತೋರಿದ ಮತ್ತು ಅದು ತನ್ನ ಮತ್ತು ಅವರ ಸಂಬಂಧದ ಮೇಲೆ ತುಂಬಾ ಪರಿಣಾಮ ಬೀರಿದ ಅನುಭವಗಳನ್ನು ಹಂಚಿಕೊಂಡರು. ಭಾಗವಹಿಸಿದವರಲ್ಲಿ ಒಬ್ಬರು, ಋಣಾತ್ಮಕ ಶಾರೀರಿಕ ಭಾಷೆಯಂತಹ ನಿಶ್ಶಬ್ದ ಪ್ರತಿಕ್ರಿಯೆಗಳ ಮೂಲಕ ಪ್ರದರ್ಶಿಸುವ ಮೌನವಾದ ಅಸಹನೆಯ ಬಗ್ಗೆ ಹೇಳಿದರು. ಕೊನೆಯಲ್ಲಿ, ಭಾಗವಹಿಸಿದ ಪ್ರತಿಯೊಬ್ಬರಿಗೂ ಪರ್ಯಾಲೋಚಿಸು ಕೆಲವು ಹೇಳಿಕೆಗಳನ್ನು ಕೊಡಲಾಯಿತು. ಒಟ್ಟಾರೆಯಾಗಿ ಅಧಿವೇಶನವು ಭಾಗವಹಿಸಿದವರಲ್ಲಿ ಅನೇಕರಿಗೆ ಸಹಾಯ ಮತು ಸ್ಪಷ್ಟೀಕರಣವನ್ನು ಕೊಟ್ಟಿತ್ತು.



# ಪ್ರಶಿಕ್ಷಕ ಸಭೆಗಳು

## NCR- ದೆಹಲಿ ವಲಯ



ದೆಹಲಿಯಲ್ಲಿ ನವೆಂಬರ್ 24 ರಂದು ನಡೆದ ಸಭೆಯಲ್ಲಿ 80 ಪ್ರಶಿಕ್ಷಕರು ಭಾಗವಹಿಸಿದ್ದರು. ಸೋ.ಕಮಲೇಶ್ ಪಟೇಲ್ ಉದ್ಘಾಟನಾ ಭಾಷಣವನ್ನು ಮಣಪಾಕ್ಕಂನಿಂದ ವೀಡಿಯೊ ಮೂಲಕ ಮಾಡಿದರು. ಅದುಆಧ್ಯಾತ್ಮಿಕಜೀವನದ ಅಂಶಗಳಾದ, ಬದಲಾವಣೆಯೊಂದಿಗೆ ಹೊಂದಿಕೊಳ್ಳುವುದು, ಆಂತರಿಕ ಅವಸ್ಥೆಯನ್ನು ಕಾಪಿಡುವುದು, ಸಂವೇದನಾಶೀಲತೆ, ವಿನಮ್ರತೆ, ಶರಣಾಗತಿ ,ಬೈಠಕ್‌ಕೊಡುವ ಮುನ್ನ ಸ್ವತಃ ತನ್ನದೇ ಅವಸ್ಥೆಯನ್ನು ಅರಿಯುವ ಸಾಮರ್ಥ್ಯ ಎಂಬುವುಗಳನ್ನು ಒಳಗೊಂಡಿತ್ತು. ವಲಯ ಸಂಚಾಲಕರಾದ ಡಾ.ಸತ್ಯ ಮಂಡಲ್‌ರವರು 'ಬದಲಾವಣೆಯನ್ನು ಒಪ್ಪಿಕೊಳ್ಳುವುದರ ಪ್ರಾಮುಖ್ಯತೆಯ ಬಗ್ಗೆ ಮಾತನಾಡಿದರು. ಐದು ಗುಂಪುಗಳನ್ನು ರಚಿಸಿ, ಅವುಗಳಿಗೆ ಚರ್ಚಿಸಲು ಒಂದೊಂದು ವಿಷಯ ಕೊಡಲಾಯಿತು. ತಂಡಗಳ ಮುಂದಾಳುಗಳು ದತ್ತ ವಿಷಯಗಳ ಬಗೆಗಿನ ಕಾರ್ಯಯೋಜನೆಯನ್ನು ಮುಂದಿನ ಸಭೆಯಲ್ಲಿ ಮಂಡಿಸಬೇಕಾಗಿತ್ತು. ದೆಹಲಿಯ ಕೇಂದ್ರ ಸಂಚಾಲಕ ಸೋ. ಸುಧೀರ್ ಮಾರ್ವಅವರು ಬುರ್ರೈರಾಷ್ಟ್ರೀಯ ಆಶ್ರಮದ ಬಗೆಗಿನ ಪ್ರಸ್ತುತಿಯೊಂದನ್ನು ಮಂಡಿಸಿ, ಆಶ್ರಮಕ್ಕೆ ಭೂಮಿ ಪಡೆದ ನಂತರ ಆದ ಪ್ರಗತಿಯ ಬಗ್ಗೆ ಸವಿವರವಾಗಿ ತಿಳಿಸಿದರು.

## ಜೈಪುರ, ರಾಜಸ್ಥಾನ



ಜೈಪುರ ವಲಯ ಆಶ್ರಮದಲ್ಲಿಅಕ್ಟೋಬರ್ 21 ಮತ್ತು 22ರಂದು ಪ್ರಶಿಕ್ಷಕ ಸಭೆಯೊಂದು ನಡೆಯಿತು. ಚಾರಿತ್ರ್ಯ ನಿರ್ಮಾಣ, ಪ್ರಶಿಕ್ಷಕರ ಕಾರ್ಯದಕ್ಷತೆಯನ್ನು ಪ್ರೋತ್ಸಾಹಿಸಿ, ಹೆಚ್ಚಿಸಲು ಉಪವಲಯ ತಂಡಗಳ ರಚನೆ, ಯುವ ತರಬೇತಿ ಮತ್ತು ಹೊಸ ಪ್ರಶಿಕ್ಷಕರುಗಳಿಗಾಗಿ ಆಯ್ಕೆ ಪ್ರಕ್ರಿಯೆಯೊಂದರ ತಯಾರಿ – ಇವುಗಳ ಮೇಲೆ ಗಮನ ಕೇಂದ್ರೀಕರಿಸಲಾಗಿತ್ತು. ಭಾಗವಹಿಸಿದವರನ್ನು ಭೌಗೋಳಿಕವಾಗಿ 4 ಉಪವಲಯಗಳನ್ನಾಗಿ ವಿಭಾಗಿಸಲಾಯಿತು ಮತ್ತು ಸಮನ್ವಯಾಧಿಕಾರಿಗಳನ್ನು ನೇಮಿಸಲಾಯಿತು. ಚರ್ಚೆಗಳ ನಂತರ ಸಮನ್ವಯಾಧಿಕಾರಿಗಳು ತಮ್ಮಕಾರ್ಯಯೋಜನೆಯನ್ನು ಮಂಡಿಸಿದರು. ಎರಡನೆಯ ದಿನ ಪ್ರಶಿಕ್ಷಕರಾಗಬಲ್ಲವರನ್ನು ಗುರುತಿಸಿ, ಬೆಳೆಸಿ, ತರಬೇತಿ ಕೊಡುವ ಅಗತ್ಯತೆಯನ್ನು ವಿವರಿಸಲಾಯಿತು. ಭಾಗವಹಿಸಿದವರೆಲ್ಲ ತೃಪ್ತಿಹೊಂದಿದರು ಮತ್ತುಅಧಿವೇಶನಾನಂತರ ಪುನಶ್ಚೇತನಪಡೆದರು.

## ಕರ್ನಾಟಕ



ಕರ್ನಾಟಕದಕ್ಷಿಣ ವಲಯ ಕೇಂದ್ರಗಳಲ್ಲಿ ಡಿಸೆಂಬರ್ 8 ಮತ್ತು 9ನ್ನು ಪ್ರಶಿಕ್ಷಕ ಯಾನ ವಾರವಾಗಿ ಸಂಘಟಿಸಲಾಯಿತು.ಒಟ್ಟು 24 ಕೇಂದ್ರಗಳನ್ನು 27 ಪ್ರಶಿಕ್ಷಕರು ಸಂದರ್ಶಿಸಿದರು. ವಾರಾಂತ್ಯದ ಈ ಅವಧಿಯಲ್ಲಿ 24 ವಸತಿ ಸಮಾವೇಶಗಳು, 17 ಕೇಂದ್ರಗಳಲ್ಲಿ ಇಡೀದಿನ ಕಾರ್ಯಕ್ರಮಗಳು ಮತ್ತು 6 ಕೇಂದ್ರಗಳಲ್ಲಿ ಅರ್ಧದಿನದ ಕಾರ್ಯಕ್ರಮಗಳು ನಡೆದವು. ಕಾರ್ಯಕ್ರಮದ ವಸ್ತು 'ಮಿಷನ್ ಸಾಹಿತ್ಯವನ್ನು ಓದುವುದರ ಪ್ರಾಮುಖ್ಯತೆ' ಎಂಬುದಾಗಿತ್ತು. ಕಾರ್ಯಕ್ರಮವು ವೈಯಕ್ತಿಕ ಬೈಠಕ್‌ಗಳಿಂದ ಆರಂಭವಾಗಿ, ಸಾಯಂಕಾಲ ವಸತಿ ಸಮಾವೇಶದಲ್ಲಿ ಸಾಧನೆಯ ಮೂಲ ಅಂಶಗಳನ್ನು ವಸ್ತುವಾಗಿ ತೆಗೆದುಕೊಳ್ಳಲಾಗಿತ್ತು. ರವಿವಾರದ ಕಾರ್ಯಕ್ರಮವು ಸತ್ಸಂಗದೊಡನೆ ಆರಂಭವಾಗಿ, ಸೋ. ಕಮಲೇಶ್‌ಅವರು ಸೂಚಿಸಿದ 9 ಪುಸ್ತಕಗಳನ್ನು ಓದುವುದರಅಗತ್ಯವನ್ನು ಒತ್ತಿಹೇಳುವ ಚರ್ಚೆಯೊಂದಿಗೆ ಮುಂದುವರಿಯಿತು.

## ಉತ್ತರಕರ್ನಾಟಕದಲ್ಲಿ ಪ್ರಶಿಕ್ಷಕ ಭೇಟಿಗಳು

ಡಿಸೆಂಬರ್ 7 ಮತ್ತು 8 ರಂದು ಬೆಂಗಳೂರಿನಿಂದ ಪ್ರಶಿಕ್ಷಕರಾದ ಸೋ.ಎನ್.ಎಸ್. ನಾಗರಾಜ, ಸೋ.ಬಿ.ಜಿ. ಪ್ರಸನ್ನಕೃಷ್ಣ ಮತ್ತು ಸೋ. ಗಿರೀಶ್ ತೊಟ್ಲೂರ್ ಇವರು ಪ್ರಕಟಣಾ ವಿಭಾಗದ ಸ್ವಯಂಸೇವಕರೊಡಗೂಡಿ ಉತ್ತರ ಕರ್ನಾಟಕದ ವಿವಿಧ ಕೇಂದ್ರಗಳನ್ನು ಸಂದರ್ಶಿಸಿ ಭಾಷಣಗಳು ಮತ್ತು ಸತ್ಸಂಗಗಳನ್ನು ನಡೆಸಿದರು. ವಲಯ ಸಂಚಾಲಕರಾದ ಸೋ. ರಾಜುಕಾಶಂಪುರ್‌ಕರ್ ಮತ್ತು ಸ್ಥಳೀಯ ಪ್ರಶಿಕ್ಷಕರು ಕೂಡ ಸೇಡಂ, ಶೋರಾಪುರ, ಯಾದಗಿರಿ, ಗೋಗಿ, ಹುಮ್ನಾಬಾದ್, ಭಾಲ್ಕಿ ಮತ್ತು ಬೀದರ್ ಮುಂತಾದೆಡೆ ಭೇಟಿಯಲ್ಲಿ ಪಾಲ್ಗೊಂಡರು. ಅಲ್ಲಿ ಡಿಸೆಂಬರ್ 8ರಂದು ಪೂರ್ಣ ದಿನದ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಡಿಸೆಂಬರ್ 9 ರಂದು ಚಟುವಟಿಕೆಗಳು ನಡೆದ ತಾಣವಾಗಿದ್ದ ಗುಲ್ಬರ್ಗ ಆಶ್ರಮದಲ್ಲಿ ಅಂದು 270 ಅಭ್ಯಾಸಿಗಳು ಮತ್ತು ಉತ್ತರ ಕರ್ನಾಟಕದ ಎಲ್ಲ ಪ್ರಶಿಕ್ಷಕರು ಒಟ್ಟು ಸೇರಿದ್ದರು. ಅಲ್ಲಿ 'ಹೃದಯದಿಂದ ಸೇವೆಮಾಡಿ' ಎಂಬ ವಿಷಯದ ಮೇಲೆ ಭಾಷಣಗಳು, ಅದೇ ವಿಷಯದ ಮೇಲೆ ತಂಡಚರ್ಚೆ, ತದನಂತರ ಪ್ರಶಿಕ್ಷಕರ ಸಭೆ ಮತ್ತುಒಂದು ಪ್ರಶ್ನೋತ್ತರ ಇದ್ದವು. ಸಾಯಂಕಾಲ, ಒಂದು ಪರಿಚಯಾತ್ಮಕ ಸಭೆ ನಡೆದು ಸೋ. ನಾಗರಾಜ, ಸೋ. ಪ್ರಸನ್ನ ಮತ್ತು ಸೋ. ರಾಜು ಮಾತನಾಡಿದರು. 30 ಮಂದಿ ಅತಿಥಿಗಳಲ್ಲಿ ಹತ್ತು ಮಂದಿ ಆನಂತರಅಭ್ಯಾಸವನ್ನು ಪ್ರಾರಂಭಿಸಿದರು.



## ಜಂಟಿಕಾರ್ಯದರ್ಶಿಯವರ ಅಸ್ಸಾಂ ಭೇಟಿ



ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಅಸ್ಸಾಂತೈಲ ವಿಭಾಗದಆಮಂತ್ರಣದ ಮೇರೆಗೆಜೊತೆ ಕಾರ್ಯದರ್ಶಿಯವರಾದ ಸೋ.ಎ.ಪಿ. ದೊರೈಯವರು 'ತೀವ್ರನಿಗಾಜಾಗೃತಿ ಸಪ್ತಾಹ 2012'ದಲ್ಲಿ ಭಾಗವಹಿಸಲು ದಿಗ್‌ಬಾಯ್‌ಗೆ ಅಕ್ಟೋಬರ್ 31 ರಂದು ಆಗಮಿಸಿದರು. ಅಂದು ಬುಧವಾರವಾದುದರಿಂದ ಅವರು ಸುಮಾರು 40 ಸ್ಥಳೀಯ ಅಭ್ಯಾಸಿಗಳೊಂದಿಗೆ ಒಂದುಗಂಟೆಯ ಸುದೀರ್ಘಕಾಲದ ಅಧಿವೇಶನವನ್ನು ನಡೆಸಿದರು. ಅಲ್ಲಿ ಸಹಜಮಾರ್ಗ ಅಭ್ಯಾಸದ ವಿವಿಧ ಅಂಶಗಳ ಮೇಲೆ ಮಾತನಾಡುವಂತೆ ಅಭ್ಯಾಸಿಗಳನ್ನು ಕೇಳಲಾಯಿತು. ಇದೇ ಕಾರ್ಯಕ್ರಮವು ಸೋ. ದೊರೈಯವರ ಮರುಪ್ರಯಾಣದಲ್ಲಿ ಮುಂದಿನ ರವಿವಾರವೂ (ನವೆಂಬರ್ 4) ತೀನ್‌ಸುಕಿಯಾ ಆಶ್ರಮದಲ್ಲಿ ಸತ್ಸಂಗಾನಂತರ ಎರಡು ಗಂಟೆಗಳ ಕಾಲ ಪುನರಾವರ್ತಿಸಿತು. ಅಭ್ಯಾಸಿಗಳು ಈ ಕಾರ್ಯಕ್ರಮಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಮತ್ತು ಪ್ರಶಿಕ್ಷಕರು ಭವಿಷ್ಯತ್ತಿನಲ್ಲಿಇಂಥ ಪಾರಸ್ಪರಿಕ ಕಾರ್ಯಕ್ರಮವನ್ನು ಇಟ್ಟುಕೊಳ್ಳುವ ಆಶ್ವಾಸನೆಯನ್ನಿತ್ತರು.

ನವೆಂಬರ್ 1ರಂದು ಸೋ. ಸುನಂದ ಪಾಂಡೆ, ಮುಖ್ಯ ನಿಗಾ ವ್ಯವಸ್ಥಾಪಕ, ಭಾರತೀಯತೈಲ ನಿಗಮ, ದಿಗ್‌ಬೋಯ್ ಮತ್ತುಕೇಂದ್ರದ ಪ್ರಶಿಕ್ಷಕರು ಸ್ಥಳೀಯ ಪ್ರೌಢಶಾಲೆಗಳಿಗಾಗಿ ಒಂದು ಚರ್ಚಾಕೂಟವನ್ನು ಏರ್ಪಡಿಸಿದರು. ಸುಮಾರು 40 ವಿದ್ಯಾರ್ಥಿಗಳು 'ವಿದ್ಯಾರ್ಥಿಗಳು ಮೌಲ್ಯ ವ್ಯವಸ್ಥೆಗಳ ಇಂಧನದಿಂದ ತುಂಬಲ್ಪಡಬೇಕಾದ ಅಗತ್ಯವಿದೆ, ಮಹತ್ವಾಕಾಂಕ್ಷೆಯಿಂದಲ್ಲ' ಎಂಬುದರ ಬಗ್ಗೆ ಮಾತನಾಡಿದರು. ಚರ್ಚಾಕೂಟದ ಗುಣಮಟ್ಟ ಅತ್ಯುತ್ಕೃಷ್ಟವಾಗಿತ್ತು. ಕೊನೆಯಲ್ಲಿ ಸೋ. ದೊರೈಯವರು ಮಹತ್ವಾಕಾಂಕ್ಷೆ ಮತ್ತು ಉನ್ನತಾಕಾಂಕ್ಷೆಗಳ ಬಗ್ಗೆ ಗುರುಗಳ ಬೋಧನೆಯನ್ನು ಪ್ರಸ್ತುತಪಡಿಸಿದರು. ಮರುದಿನ ಅವರು, ಉದ್ಯೋಗಿಗಳು ಮತ್ತುಅವರ ಕುಟುಂಬಿಕರು ಭಾಗವಹಿಸಿದ 'ತೀವ್ರನಿಗಾಜಾಗೃತಿ ಸಪ್ತಾಹ'ದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದರು. ಬಹುಮಾನ ವಿತರಣೆಯ ನಂತರ ಅವರು, ಧ್ಯಾನದ ಮೂಲಕ ಆಂತರಿಕ ನಿಗಾವನ್ನು ಬೆಳೆಸಿಕೊಳ್ಳುವ ಅಗತ್ಯದ ಕುರಿತಾಗಿ ಮಾತನಾಡಿದರು.

ನವೆಂಬರ್ 3ರ ಅಪರಾಹ್ನಒಂದು ಸಣ್ಣಸಂಖ್ಯೆಯ ಅತಿಥಿಗಳಿಗೆ ಧ್ಯಾನದಕಾರ್ಯಾಗಾರವೊಂದು ನಡೆಯಿತು. ದಿಗ್‌ಬೋಯ್ ಮತ್ತು ಸಮೀಪದ ಕೇಂದ್ರಗಳಾದ ತೀನ್‌ಸುಕಿಯಾ, ಡೂಮ್‌ಡೂಮಾ, ಮಾರ್ಗೆರಿಟಾ ಮತ್ತು ಸಿಬ್‌ಸಾಗರ್‌ನ ಸುಮಾರು 60 ಅಭ್ಯಾಸಿಗಳು ವಲಯ ಸಂಚಾಲಕರಾದ ಸೋ.ಧನಿಚಂದ್ ಅವರೊಂದಿಗೆ ಉಪಸ್ಥಿತರಿದ್ದರು. ಸಹಜಮಾರ್ಗದ ಬಗ್ಗೆ





ಮಾತನಾಡಲು ಕೆಲವರು ಅಭ್ಯಾಸಿಗಳನ್ನು ಕೇಳಿಕೊಳ್ಳಲಾಯಿತು. ಮತ್ತು ಸೋ. ದೊರೈಯವರ ಸವಿವರ ಪೂರ್ವಕವಾದ ಪ್ರಸ್ತುತಿಯೊಂದಿಗೆ ಅಧಿವೇಶನವು ಮುಕ್ತಾಯವಾಯಿತು. 7 ಮಂದಿ ಆಕಾಂಕ್ಷಿಗಳು ತಮ್ಮಆರಂಭಿಕ ಬೈಠಕ್‌ಗಳನ್ನು ಪಡೆದರು.

ಸಾಯಂಕಾಲ ದಿಗ್‌ಬಾಯ್‌ನ ಆಫೀಸರ್ಸ್‌ಕ್ಲಬ್, 'ಧ್ಯಾನದ ಮೂಲಕ ಸ್ವ–ವಿಕಸನ' ಎಂಬ ವಿಷಯದ ಮೇಲೆ ಭಾಷಣವೊಂದನ್ನು ಏರ್ಪಡಿಸಿತ್ತು. ಅಧಿಕಾರಿಗಳು ಮತ್ತುಅವರ ಪತ್ನಿಯರನ್ನೊಳಗೊಂಡು ಕ್ಲಬ್‌ನ 50 ಮಂದಿ ಸದಸ್ಯರು ಉಪಸ್ಥಿತರಿದ್ದರು. ಸಮರ್ಥಗುರುವೊಬ್ಬನ ಮಾರ್ಗದರ್ಶನದೊಂದಿಗೆ ಅಂತರ್ಯಾಮಿಯನ್ನು ಧ್ಯಾನದ ಮೂಲಕ ಸಂಪರ್ಕಿಸುವ ವಿಷಯದ ಮೇಲೆ ಸೋ. ದೊರೈಯವರು ಮಾಡಿದ ಸವಿಸ್ತಾರವಾದ ಭಾಷಣವುಎಲ್ಲರ ಮೆಚ್ಚುಗೆಯನ್ನು ಗಳಿಸಿತು.ಆಧ್ಯಾತ್ಮದ ಸಂದೇಶವುಅವರ ಹೃದಯಗಳನ್ನು ಸ್ಪರ್ಶಿಸಿದಂತಿತ್ತು.

## ಆಶ್ರಮ ನಿರ್ವಹಣಾ ಮಂಡಲಿ– ಪರಿಚಯಾತ್ಮಕಕಾರ್ಯಕ್ರಮ: ಆಂಧ್ರಪ್ರದೇಶ–ಉತ್ತರ

ಸೆಪ್ಟೆಂಬರ್ 21ರಿಂದ 23ರ ವರೆಗೆಆಶ್ರಮ ನಿರ್ವಹಣಾ ಮಂಡಲಿಯ 115 ಸದಸ್ಯರು ಮತ್ತು ಆಂಧ್ರಪ್ರದೇಶ–ಉತ್ತರ ವಲಯ ಅಭ್ಯಾಸಿಗಳಿಗೆ ಒಂದು ಪರಿಚಯಾತ್ಮಕ ಕಾರ್ಯಕ್ರಮವನ್ನು ತುಮಕುಂಟ ವಲಯ ಆಶ್ರಮದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಈ ಉದ್ದೇಶಗಳಿಗಾಗಿ ಏರ್ಪಡಿಸಲಾಗಿತ್ತು.

- ❖ಆಶ್ರಮ ನಿರ್ವಹಣಾ ಮಂಡಲಿಯ ಸದಸ್ಯರಿಗೆತಮ್ಮಆಶ್ರಮಕ್ಕೆ ಅನ್ವಯಿಸಿದಂತೆ, ಆಶ್ರಮ ನಿರ್ವಹಣಾ ಮಂಡಲಿಯ ವ್ಯಾಪ್ತಿ, ಪಾತ್ರಗಳು ಮತ್ತು ಜವಾಬ್ದಾರಿಗಳು ಇವನ್ನು ಪರಿಚಯಿಸುವುದು.
- ❖ಮಂಡಲಿಯ ನಿಯತವಾದ, ವ್ಯವಸ್ಥಿತವಾದ ಸಭೆಗಳು ಮತ್ತು ಆ ಸಭೆಗಳ ಕೂಲಂಕಷ ವರದಿಯಅಗತ್ಯದ ಬಗ್ಗೆ ಒತ್ತುಕೊಡುವುದು.
- ❖ಯಾವಾಗಲೂ 'ಸಂಪರ್ಕದ ಮಾರ್ಗದರ್ಶಿ ಸೂತ್ರಗಳಿ'ಗನುಗುಣವಾಗಿ ಆಶ್ರಮ ನಿರ್ವಹಣಾ ಮಂಡಲಿಯ ಸಭೆಗಳನ್ನು ನಡೆಸುವುದು.

ಅನುಭವಿ ಭಾಷಣಕಾರರು, ಪಾತ್ರಗಳು ಮತ್ತು ಜವಾಬ್ದಾರಿಗಳು, ಆಶ್ರಮ ಬಳಕೆ, ಹಣಕ್ಕೆ ಸಂಬಂಧಿಸಿದ ಧೋರಣೆ, ಸ್ವಾಗತ ಪೀಠ, ನಿರ್ವಹಣೆ, ಚಿಣ್ಣರ ಅಂಗಳ, ಆಶ್ರಮ ನಿರ್ವಾಹಕ ಮತ್ತು ಸ್ವಯಂಸೇವಕರು ಈ ವಿಷಯಗಳಿಗೆ ಸಂಬಂಧಿಸಿದಂತೆ ಮಾತನಾಡಿದರು. ಆಶ್ರಮ ನಿರ್ವಹಣಾ ಮಂಡಲಿ ಕೈಪಿಡಿಯ ತೆಲುಗು ಅನುವಾದವನ್ನು ಆರಂಭಿಸುವುದನ್ನು ಅಂಗೀಕರಿಸಲಾಯಿತು. ಪ್ರಧಾನಕಾರ್ಯಾಲಯದ ಸೋ. ಶ್ರೀರಾಮ್ ಅವರೊಡನೆ ಹಣಕಾಸಿನ ನೀತಿಯ ಬಗ್ಗೆ ಪ್ರಶ್ನೋತ್ತರ ಕಾಲವೂ ಇತ್ತು.

ಕಾರ್ಯಕ್ರಮಕ್ಕಾಗಿ ಗುರುಗಳಿತ್ತ ಸಂದೇಶಕ್ಕೆ ಸಂಬಂಧಿಸಿದ ಹಾಗೆ, ನಡೆ ಮತ್ತು ನುಡಿಗಳಲ್ಲಿ ಆಧ್ಯಾತ್ಮಿಕಅಂಶದ ವಿಚಾರಗಳಿಗೆ ಒತ್ತುಕೊಡಲಾಗಿತ್ತು. ಪರಿಶುದ್ಧ ವಿಚಾರವು ಮಧುರವಾದ ನಡೆ ನುಡಿಗಳಿಗೊಯ್ಯುವುದು ಎಂಬುದುಕಾರ್ಯಕ್ರಮದ ಮಾರ್ಗದರ್ಶಿ ಸೂತ್ರವಾಗಿತ್ತು. ಆಶ್ರಮದ ವಾತಾವರಣವನ್ನು ಸಂರಕ್ಷಿಸಬೇಕೆಂಬುದನ್ನು ಒತ್ತಿಹೇಳಲಾಯಿತು.

## ಸಹಜಮಾರ್ಗ ಆಧ್ಯಾತ್ಮಿಕ ಪ್ರತಿಷ್ಠಾನ, ಗೋವಾ ಆಶ್ರಮದ ಉದ್ಘಾಟನೆ




26.12.2012 ರಂದು ಪೂಜ್ಯ ಗುರುಗಳು ವೀಡಿಯೊ ಮೂಲಕ ಗೋವಾ ಆಶ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀರಾಮಚಂದ್ರ ಮಿಷನ್ನಿನ ಪಶ್ಚಿಮ ಕರಾವಳಿಯ ನಕಾಶೆಯಲ್ಲಿ ಗೋವಾ ತನ್ನ ಹೆಸರನ್ನು ದಾಖಲಿಸಿದಂತಾಯಿತು. ಈ ಆಶ್ರಮವು ದಾಬೋಲಿನ್ ವಿಮಾನ ನಿಲ್ದಾಣದಿಂದ 8 ಕಿಮೀ ದೂರದಲ್ಲಿರುವ ಸಾಂಕೋಲೆ ಎಂಬ ಹಳ್ಳಿಯಲ್ಲಿದೆ. ಈ ಆಶ್ರಮದ ನಿರ್ಮಾಣಕ್ಕಾಗಿ ಸುಮಾರು ಎರಡೂವರೆ ಎಕರೆಯಷ್ಟು ಪ್ರದೇಶವನ್ನು ಮುಂಬಯಿಯ ಸೋ. ಬಿ.ಡಿ. ಕೋಸಂಬಿಯವರು ದಾನದ ಮೂಲಕ ಸಮರ್ಪಿಸಿದ್ದಾರೆ. ಈ ಪ್ರದೇಶದಲ್ಲಿರುವ ಹಾಲಿ ಕಟ್ಟಡದ ಧ್ಯಾನಮಂದಿರದಲ್ಲಿ ಸುಮಾರು 80 ಮಂದಿ ಅಭ್ಯಾಸಿಗಳು ಧ್ಯಾನ ಮಾಡಲು ಅವಕಾಶವಿದೆ. ಉದ್ಘಾಟನೆಯ ಸಮಯದಲ್ಲಿ ಸೋ. ಕೋಸಂಬಿಯವರ ಜ್ಯೇಷ್ಠ ಪುತ್ರರಾದ ಸೋ. ವೀರಜ್ ಮತ್ತು ಸೋ. ಪಿ.ಆರ್.ಕೃಷ್ಣ, ಸುಧೀರ್ ಮಾರ್ವಾಹ ಮತ್ತು ಆದಿತ್ಯ ಆರ್ಯರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಗುರುಗಳು ಬಾಬೂಜಿಯವರ ಈ ಸಂದೇಶವನ್ನು ಸ್ಮರಿಸಿದರು. “ಪ್ರತಿಯೊಂದು ಮನೆಯೂ ಆಶ್ರಮವಾಗಬೇಕು ಮತ್ತು ಆಶ್ರಮವು ಅಂತರಾತ್ಮನನ್ನು ಪ್ರತಿಬಿಂಬಿಸಬೇಕು.”

ಬೆಳಗ್ಗೆ 9 ಗಂಟೆಗೆ ಸೋ. ಪಿ.ಆರ್.ಕೃಷ್ಣರವರು ಸತ್ಸಂಗವನ್ನು ನಡೆಸಿಕೊಟ್ಟರು. ಸುಮಾರು 85 ಅಭ್ಯಾಸಿಗಳು ಭಾಗವಹಿಸಿದ್ದರು. ಗೋವಾ ಆಶ್ರಮದ ಅಭಿವೃದ್ಧಿ ಮತ್ತು ಸಂಯೋಜನಾ ಮಂಡಳಿಯ ಸದಸ್ಯರು ಸಾಕಷ್ಟು ಉತ್ತೇಜಿತರಾಗಿದ್ದು ಧ್ಯಾನಮಂದಿರ ಮತ್ತು ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿ ಕಾರ್ಯಗಳತ್ತ ಗಮನಹರಿಸುತ್ತಿದ್ದಾರೆ.

## ಸಂಯೋಜಕರ (ಫೆಸಿಲಿಟೇಟರ್) ಪ್ರಾತ್ಯಕ್ಷಿಕೆ


ಸಂಯೋಜಕರ ಪ್ರಾತ್ಯಕ್ಷಿಕ ನಿರ್ದೇಶನ ಮತ್ತು ಜಿಐಟಿಪಿ (ಹಿಂದಿ) ಕಾರ್ಯಕ್ರಮಗಳನ್ನು ಲಕ್ನೋ ಆಶ್ರಮದಲ್ಲಿ ಡಿಸೆಂಬರ್ 7 ರಿಂದ 9 ರವರೆಗೆ ನಡೆಸಲಾಯಿತು. ನಾಲ್ಕು ವಲಯಗಳಿಂದ (ಪೂರ್ವ, ಮಧ್ಯ ಹಾಗು ಪಶ್ಚಿಮ ಉತ್ತರಪ್ರದೇಶ ಹಾಗು ಉತ್ತರಖಂಡ) 65 ಅಭ್ಯಾಸಿಗಳು ಭಾಗವಹಿಸಿದ್ದರು. ಇವರೊಡನೆ 7 ಮಂದಿ ತರಪೇತುಗಾರರಾದ ಸೋ.ಛಾವಿ ಸಿಸೋಡಿಯ, ಪೂನಮ್ ಬಬ್ಬರ್, ನಂದಿತಾ ಮಾಥುರ್ ಮತ್ತು ವಿಮಲ ಶೆರಾನ್, ಸೋ. ನೀರಜ್ ಲಾವಾನಿಯ, ಜಿಗ್ನೇಶ್ ಸೋಲತ್ ಮತ್ತು ಓಂಪ್ರಕಾಶ್ ಕೇಜ್ರಿವಾಲ್ ಭಾಗವಹಿಸಿದ್ದರು.

ಡಿಸೆಂಬರ್ 7ರಂದು ಸತ್ಸಂಗದ ನಂತರ ತರಪೇತುಗಾರರಿಂದ 2 ಸಣ್ಣ ಪ್ರಹಸನಗಳನ್ನು ಪ್ರದರ್ಶಿಸಲಾಯಿತು. ಸ್ವಂತಿಕೆಯ ಸ್ವೀಕಾರ ಮತ್ತು ಸಹೋದರ ಬಾಂಧವ್ಯಕ್ಕೆ ಸಂಬಂಧಿಸಿದಂತೆ ಹಲವಾರು ಕಾರ್ಯಕ್ರಮಗಳು ನಡೆಸಲ್ಪಟ್ಟವು. ಮಧ್ಯಾಹ್ನದ ಊಟದ ನಂತರ ಮರುದಿನದ ಕಾರ್ಯಕ್ರಮಕ್ಕೆ ವಿವಿಧ ಗುಂಪುಗಳಿಂದ ಆಯ್ದ ಅಭ್ಯಾಸಿಗಳನ್ನು ಸಂಯೋಜಕರನ್ನಾಗಿ ಕಾರ್ಯನಿರ್ವಹಿಸಲು ನೇಮಿಸಲಾಯಿತು.


ಡಿಸೆಂಬರ್ 8ರಂದು 'ಧ್ಯಾನ'ದ ಬಗ್ಗೆ ಕಾರ್ಯಕ್ರಮ ನಡೆಸಲಾಯಿತು. ಆಂತರ್ಯದಲ್ಲಿ ಧ್ಯಾನದ ಪ್ರತಿಫಲನ ಹಾಗು ಅವಲೋಕನಗಳನ್ನೊಳಗೊಂಡಂತೆ, ಧ್ಯಾನದ ಸರಿಯಾದ ಕ್ರಮ ಮತ್ತು ತಿಳಿವಳಿಕೆಯನ್ನು ನೀಡುವ ಸಲುವಾಗಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಭಾವಿ ಅಭ್ಯಾಸಿಗಳಿಗೆ ಧ್ಯಾನದ ಬಗ್ಗೆ ಸುಲಭವಾಗಿ ಮತ್ತು ಸರಳವಾಗಿ ವಿವರಣೆಗಳನ್ನು ಹೇಳಲು ಸಂಯೋಜಕರು ತರಪೇತಿ ಹೊಂದುವಂತೆ ಮಾಡುವುದು ಸಹ ಕಾರ್ಯಕ್ರಮದ ಉದ್ದೇಶವಾಗಿದ್ದಿತು.

ಡಿಸೆಂಬರ್ 9ರಂದು 'ಶುದ್ಧೀಕರಣ' ದ ಬಗ್ಗೆ ಕಾರ್ಯಕ್ರಮವನ್ನು ನಡೆಸಲಾಯಿತು. ಅಭ್ಯಾಸಿಗಳಿಗೆ ಶುದ್ಧೀಕರಣದ ಪ್ರಾಮುಖ್ಯತೆ ಮತ್ತು ಅಭ್ಯಾಸಕ್ರಮದಲ್ಲಿ ಮಾಡುವ ವ್ಯತ್ಯಾಸಗಳನ್ನು ಕಂಡುಹಿಡಿದು ಅವುಗಳನ್ನು ಹೇಗೆ ಸರಿಪಡಿಸುವುದು ಹಾಗು ಅಭ್ಯಾಸಿಗಳಿಗೆ ಇದರ ಬಗ್ಗೆ ಸಂಯೋಜಕರರು ಹೇಗೆ ವಿವರಣೆಗಳನ್ನು ನೀಡಬೇಕು ಎಂಬುದರ ಬಗ್ಗೆ ತರಪೇತಿ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು.

## ಹೊಸ ಪ್ರಕಟನೆಗಳು






ಪೂಜ್ಯ ಮಾಲಿಕ್ ಕೆ ವಾರ್ತಾಯೇಂ
ಹಿಂದಿ ಡಿವಿಡಿ





ಸ್ಲೈಸಸ್ ಆಫ್ ಎಟರ್ನಿಟಿ
ಆಂಗ್ಲ ಕಿರುಪುಸ್ತಿಕೆ

ಟೇಲ್ಸ್ ಆಫ್ ವಂಡರ್, ಭಾಗ 3–
ಮಕ್ಕಳ ಪುಸ್ತಕ






ನೌ ಆಯ್ ಆಮ್ ಟೆಲ್ಲಿಂಗ್ ಯು–
ಆಂಗ್ಲ ಡಿವಿಡಿ





ಪ್ರಶಿಕ್ಷಕರಿಗಾಗಿ ಗುರುಗಳ ಉಪನ್ಯಾಸಗಳು–
ಭಾಗ 3(2010–2012)
ಆಂಗ್ಲ ಡಿವಿಡಿ




ಯೂಥ್– ಎ ಟೈಮ್ ಆಫ್ ಪ್ರಾಮಿಸ್ ಆಂಡ್
ಎಫರ್ಟ್ ಆಂಗ್ಲ ಎಂಪಿ3




ಬಿಕಮಿಂಗ್ ವಿಷನರೀಸ್
ಆಂಗ್ಲ ಡಿವಿಡಿ




ಹಾರ್ಟ್‌ಸ್ಪೀಕ್ 2010, ಭಾಗ 2
ಆಂಗ್ಲ ಡಿವಿಡಿ

## ಪ್ರಕಟಣಾ ವಿಭಾಗದಿಂದ ಸ್ವಯಂಸೇವಕರ ಕಾರ್ಯಾಗಾರ, ಗುಲ್ಬರ್ಗಾ, ಉತ್ತರ ಕರ್ನಾಟಕ

ಗುಲ್ಬರ್ಗಾ ಆಶ್ರಮದಲ್ಲಿ ಪ್ರಕಟಣಾ ವಿಭಾಗದ ಸ್ವಯಂಸೇವಕರಿಗಾಗಿ ಸೋ. ವೆಂಕಟರಾವ್‌ರವರು ಆಯೋಜಿಸಿದ ಎರಡು ದಿನಗಳ ಕಾರ್ಯಾಗಾರಕ್ಕೆ ಉತ್ತರ ಕರ್ನಾಟಕ, ಮುಂಬಯಿ ಹಾಗು ಹೈದರಾಬಾದ್ ಕೇಂದ್ರಗಳಿಂದ ಸುಮಾರು 50 ಮಂದಿ ಸ್ವಯಂಸೇವಕರು ಹಾಜರಿದ್ದರು. ಆಶ್ರಮದ ಪ್ರಕಟಣೆಗಳ ಬಗೆಗಿನ ಸ್ವಯಂ ಸೇವೆಯನ್ನು ವಿಸ್ತರಿಸುವ ಬಗ್ಗೆ, ಗುರುಗಳ ಸಂದೇಶಗಳನ್ನು ಆಶ್ರಮದ ಸಾಹಿತ್ಯ, ವೀಡಿಯೊ, ಆಡಿಯೊ ಹಾಗು ಛಾಯಾಚಿತ್ರಗಳ ಮೂಲಕ ಪಸರಿಸಲು ಮತ್ತು ಅಭ್ಯಾಸಿಗಳಲ್ಲಿ ಓದುವ ಪ್ರವೃತ್ತಿಯನ್ನು ಹೆಚ್ಚಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಲ್ಲದೆ ಪ್ರೋತ್ಸಾಹಕ ನುಡಿಗಳು, ಚರ್ಚೆಗಳು, ಆಟಗಳು, ಮಾರಾಟದ ಬಗ್ಗೆ, ಮಾರಾಟದ ಮುಂಗಟ್ಟೆಗಳ ಸ್ಥಾಪನೆಗಳ ಬಗ್ಗೆ ಅಣಕು ಪೂರ್ವಾಭ್ಯಾಸಗಳು, ಹಣಕಾಸಿನ ಲೆಕ್ಕಾಚಾರ ಮತ್ತು ಎಲ್ಲ ರೀತಿಯ ಪುಸ್ತಕಗಳ ಸಂಗ್ರಹದ ಬಗ್ಗೆ ತರಪೇತಿಯನ್ನು ನೀಡಲಾಯಿತು. ಈ ಎರಡೂ ದಿನಗಳ ಕಾರ್ಯಕ್ರಮವು ಅತ್ಯಾಸಕ್ತಿಯಿಂದೊಡಗೂಡಿ ಭಾಗವಹಿಸಿದ ಎಲ್ಲ ಸ್ವಯಂ ಸೇವಕರಿಗೆ ಸಂಪೂರ್ಣ ಪ್ರಯೋಜನ ದೊರಕಿಸಿ ಕೊಡುವ ನಿಟ್ಟಿನಲ್ಲಿ ಬಹಳವೇ ಯಶಸ್ವಿಯೆನಿಸಿತು.

## ತೆಲುಗು ಅನುವಾದ ತರಬೇತಿ ಕಾರ್ಯಕ್ರಮ

ಗುರುಗಳ ಕೃತಿಗಳನ್ನು ಆಂಗ್ಲ ಭಾಷೆಯಿಂದ ಪ್ರಾದೇಶಿಕ ಭಾಷೆಗಳಿಗೆ ಅನುವಾದ ಮಾಡಲು, ಎರಡು ಭಾಷೆಗಳ ಮೇಲಿನ ಹಿಡಿತ ಮಾತ್ರವಷ್ಟೇ ಅಲ್ಲದೆ ಸಹಜಮಾರ್ಗದ ಬಗ್ಗೆ ಕೂಡ ಆಳವಾದ ಜ್ಞಾನ ಬಹಳ ಅವಶ್ಯಕ. ಸೆಪ್ಟೆಂಬರ್ 14 ರಿಂದ 16 ರವರಗೆ ತುಮಕುಂಟ ವಲಯ ಆಶ್ರಮದಲ್ಲಿ ಸುಮಾರು 50 ಅಭ್ಯಾಸಿಗಳಿಗಾಗಿ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೂಲ ಸಿದ್ಧಾಂತಕ್ಕೆ ಧಕ್ಕೆ ಬಾರದಂತೆ, ಸ್ಥಿರತೆ ಹಾಗು ಗುಣಮಟ್ಟವುಳ್ಳ ಅನುವಾದ ತರಪೇತಿಯು ಕಾರ್ಯಕ್ರಮದ ಉದ್ದೇಶವಾಗಿತ್ತು. ಭಾವಾನುವಾದ, ಭಾಷೆಯಲ್ಲಿ ಸರಳತೆ, ಸುಲಲಿತ ಹರಿವು ಮತ್ತು ಕಾರ್ಯೋತ್ಸಾಹ ಇವು ಕಾರ್ಯಕ್ರಮದ ಪ್ರಧಾನ ವಿಷಯವಾಗಿದ್ದುವು.

ಈ ಎರಡೂ ದಿನಗಳಲ್ಲಿ ಸಹೋದರರಾದ ಅನಂತ್, ಕಾಮೇಶ್ವರ್ ಮತ್ತು ಕೃಷ್ಣರಾವ್ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಾತಾವರಣದ ಬಿಗಿಯನ್ನು ತಿಳಿಗೊಳಿಸಿದ ನಂತರ, ಚಾಲ್ತಿಯಲ್ಲಿರುವ ಭಾಷಾಂತರ ನೀತಿಯ ಬಗ್ಗೆ ನಿರೂಪಣೆ, ಅನುವಾದಕಾರರಿಗೆ ಮಾರ್ಗದರ್ಶನ ಸೂಚಿ, ಲಿಪ್ಯಂತರಕ್ಕೆ ತಂತ್ರಾಂಶ ಮಾಹಿತಿಯ ನೆರವು, ಅನುವಾದದಲ್ಲಿ ಒಂದು ಪ್ರಾಯೋಗಿಕ ತರಬೇತಿ – ಇವೆಲ್ಲವೂ ಕಾರ್ಯಕ್ರಮದ ಮುಖ್ಯಾಂಶಗಳಾಗಿದ್ದುವು.

## ಅಭ್ಯಾಸದಲ್ಲಿ ಪ್ರಾಥಮಿಕ ಶಿಕ್ಷಣ

ಹೊಸದಾಗಿ ರೂಪಿಸಲ್ಪಟ್ಟ 'ಅಭ್ಯಾಸದಲ್ಲಿ ಪ್ರಾಥಮಿಕ ಶಿಕ್ಷಣ' (ಗ್ರೌಂಡಿಂಗ್ ಇನ್ ದಿ ಪ್ರಾಕ್ಟೀಸ್) ಕಾರ್ಯಕ್ರಮವು ಅಹಮದಾಬಾದ್ ಮತ್ತು ಜಯಪುರಗಳಲ್ಲಿ 3 ದಿನಗಳ ಹಾಗು ಉಡುಪಿಯಲ್ಲಿ ಒಂದು ದಿನದ ಕಾರ್ಯಕ್ರಮವಾಗಿ ನಿಯೋಜಿಸಲಾಗಿತ್ತು. ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಮುಂಬಯಿಗಳಿಂದ ಅಭ್ಯಾಸಿಗಳು ಅಕ್ಟೋಬರ್ 12 ರಿಂದ 14 ರವರೆಗೆ ಅಹಮದಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಒಟ್ಟು 30 ಸಂಯೋಜಕರ ಹಾಗು 35 ಕ್ಕೂ ಹೆಚ್ಚಿನ ಸ್ವಯಂಸೇವಕರ ತಂಡದ ನೆರವಿನಿಂದ ಈ ಕಾರ್ಯಕ್ರಮವನ್ನು ನಡೆಸಲಾಯಿತು. ಮಿಷನ್ನಿನ ಕೃತಿಗಳ ಮತ್ತು ಗುರುಗಳ ಆಡಿಯೊ, ವೀಡಿಯೊಗಳ ನೆರವಿನೊಂದಿಗೆ ನಡೆಸಲಾದ ಈ ಕಾರ್ಯಕ್ರಮವು ನೈಜವಾಗಿ ಮೂಡಿಬಂದಿತು. ಹದಿನೈದು ವರುಷಗಳ ಸಾಧನೆಯ ಅನುಭವವುಳ್ಳ ಅಭ್ಯಾಸಿಗಳಿಗೂ ಸಹ, ಈ ಕಾರ್ಯಕ್ರಮದಿಂದ ಸಹಜಮಾರ್ಗದ ಬಗೆಗಿನ ಅವರ ತಿಳಿವಳಿಕೆಗಳೇ ಸಂಪೂರ್ಣವಾಗಿ ಬದಲಾದುವೆಂದೆನಿಸಿತು. ಅಲ್ಲದೆ, ನಿಜವಾದ ಅರ್ಥದಲ್ಲಿ ಸಹಜಮಾರ್ಗಿ ಎನಿಸಲು ಏನೆಲ್ಲ ಅವಶ್ಯವಿದೆ ಎಂಬುದರ ಬಗ್ಗೆ ಅಭ್ಯಾಸಿಗಳಲ್ಲಿ ಅರಿವು ಮೂಡಿತು.

ಜಯಪುರ ವಲಯದಿಂದ ನವೆಂಬರ್ 24 ರಿಂದ 26 ರವರೆಗೆ ನಡೆದ 3 ದಿನಗಳ ಒಂದು ಕಾರ್ಯಕ್ರಮದಲ್ಲಿ 6 ಮಂದಿ ಸಂಯೋಜಕರೊಡನೆ 70 ಅಭ್ಯಾಸಿಗಳು ಭಾಗವಹಿಸಿದ್ದರು. ನಡೆದ ಅನೇಕ ಕಾರ್ಯಕ್ರಮಗಳಲ್ಲಿ ಹಾಗು ಆಡಿಯೊ, ವೀಡಿಯೊ ಪ್ರದರ್ಶನಗಳಲ್ಲಿ ಅಭ್ಯಾಸಿಗಳು ಮೈ ಮರೆತು ಭಾಗವಹಿಸಿದ್ದುದು ಕಂಡುಬಂದಿತು. ಅವರುಗಳಲ್ಲಿ ಹೃದಯ ತೆರೆದುಕೊಂಡಂತಹ ಅನುಭವಗಳು ಉಂಟಾದುವು. ನಂತರ ಅಭ್ಯಾಸಿಗಳು ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಹಾಗು ಸಂಯೋಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮೂಲಭೂತ ಸೌಲಭ್ಯಗಳನ್ನು ವಲಯ ಆಶ್ರಮದಿಂದ ಸ್ವಯಂಸೇವಕರ ಪ್ರೇಮಭರಿತ ಕಠಿಣ ಶ್ರಮದೊಂದಿಗೆ ಒದಗಿಸಲ್ಪಟ್ಟಿತ್ತು.

ಅಭ್ಯಾಸಿಯ ದಿನಚರಿ ಬರೆಯುವ ಬಗೆಗಿನ ಶಿಕ್ಷಣ ಕಾರ್ಯಕ್ರಮ ಡಿಸೆಂಬರ್ 16 ರಂದು ಉಡುಪಿ ಬಳಿ ಇರುವ ಪೆರಂಪಳ್ಳಿ ಆಶ್ರಮದಲ್ಲಿ ಜರುಗಿತು. ಇದರಲ್ಲಿ 3 ಅಭ್ಯಾಸಿಗಳು ಹಾಗು ಇಬ್ಬರು ಸಹಾಯಕರು ಭಾಗವಹಿಸಿದ್ದರು. ದಿನಚರಿ ಬರೆಯುವಿಕೆ ಮುಂತಾದ ವಿಷಯದಲ್ಲಿ, ಹಾಗು ಅದು ಆಧ್ಯಾತ್ಮಿಕ ಪ್ರಗತಿಯಲ್ಲಿ, ಚಾರಿತ್ರ್ಯ ನಿರ್ಮಾಣದಲ್ಲಿ ಹೇಗೆ ಒಂದು ಉಪಕರಣವಾಗಿದೆ ಎಂಬುದರ ಬಗ್ಗೆ ಸಹ ಚರ್ಚೆ ನಡೆಯಿತು.ಆಡಿಯೊ – ವೀಡಿಯೊ ತುಣುಕುಗಳು ಮತ್ತು ಗುರುಗಳ ಉಲ್ಲೇಖಗಳನ್ನು ತೋರಿಸಲಾಯಿತು. ಕಾರ್ಯಕ್ರಮವನ್ನು ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ ನಡೆಸಲಾಯಿತು. ಮುಂದೆ ನಿಯೋಜಿಸಲಾಗುವ 'ಧ್ಯಾನ' ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಅಭ್ಯಾಸಿಗಳನ್ನು ಉತ್ತೇಜಿಸಲು ಪಾಲ್ಗೊಂಡ ಅಭ್ಯರ್ಥಿಗಳು ಭರವಸೆ ನೀಡಿದರು. ಕಾರ್ಯಕ್ರಮದ ಬಗೆಗೆ ಉತ್ಕೃಷ್ಟ ಅಭಿಪ್ರಾಯಗಳು ವ್ಯಕ್ತವಾದುವು.



# ಆಶ್ರಮಗಳಲ್ಲಿಯ ಕಾರ್ಯಕ್ರಮಗಳು

ರವಿವಾರದ ಪೂರ್ಣದಿನದ ಕಾರ್ಯಕ್ರಮಗಳು, ಹಳೆಯ ಮತ್ತು ಹೊಸ ಅಭ್ಯಾಸಿಗಳನ್ನು ಒಟ್ಟಿಗೆ ಸೇರಿಸುವ ಉದ್ದೇಶದಿಂದ ನಿರ್ವಹಿಸಿಕೊಳ್ಳಲಾಗುತ್ತದೆ. ಗುಂಪು ಚರ್ಚೆಗಳು ಹಾಗು ಪ್ರಶ್ನೋತ್ತರ ಸತ್ರಗಳಲ್ಲಿ ಸಾಧನೆಯಲ್ಲಿಯ ಶಂಕೆಗಳನ್ನು ಪರಿಹರಿಸಿಕೊಳ್ಳಲಾಗುತ್ತದೆ. ಈ ಕಾರ್ಯಕ್ರಮಗಳು, ಅಭ್ಯಾಸಿಗಳು, ಸಾಧನೆಯನ್ನು ನಿಯಮಿತಗೊಳಿಸಿಕೊಂಡು ತಮ್ಮ ಗುರಿಯತ್ತ ಸಾಗಲು ಪ್ರೇರೇಪಿಸುತ್ತವೆ.

ವಿವಿಧ ಕೇಂದ್ರಗಳಲ್ಲಿ ನಿರ್ವಹಿಸಲಾದ ಪೂರ್ಣ ಹಾಗು ಅರ್ಧದಿನದ ಕಾರ್ಯಕ್ರಮಗಳ ವರದಿಗಳು ಈ ಕೆಳಗಿನಂತಿವೆ. ತಮಿಳುನಾಡಿನ "ಅವಿನಾಶಿ" ಕೇಂದ್ರದಲ್ಲಿ ಅಕ್ಟೋಬರ್ 2 ರಂದು ಆಚರಿಸಿದ ಕಾರ್ಯಕ್ರಮದಲ್ಲಿ 55 ಅಭ್ಯಾಸಿಗಳು ಹಾಜರಿದ್ದರು. ಈ ಕಾರ್ಯಕ್ರಮವು ಅಧ್ಯಾತ್ಮದ ಬಗ್ಗೆ ತಿಳುವಳಿಕೆಯನ್ನು ಮೂಡಿಸಲು ಹಾಗು ಹೊಸಬರಿಗೆ ಸಹಜಮಾರ್ಗದ ಬಗ್ಗೆ ವಿಷದಪಡಿಸುವ ಭಾಷಣಗಳನ್ನೊಳಗೊಂಡಿತ್ತು. ಸಹಜಮಾರ್ಗದ ಮೂಲ ತತ್ವಗಳ ವಿಷಯವೂ ಚರ್ಚಿಸಲಾಯಿತು. ಸಹಭಾಗಿಗಳಿಗೆ ಸಾಧ್ಯವಾದಮಟ್ಟಿಗೆ ಮೌನವನ್ನಾಚರಿಸಿ ಒಳಧ್ವನಿಯನ್ನಾಲಿಸಲು ಉದ್ಯುಕ್ತಗೊಳಿಸಲಾಯಿತು.

ಕೇರಳದಲ್ಲಿಯ ಪಾಯಾನೂರಿನಲ್ಲಿ ಅಕ್ಟೋಬರ್ 23 ರಂದು ಸಹಭಾಗಿಗಳು "ದಿವ್ಯಲೋಕದ ಪಿಸುಮಾತುಗಳ'ಲ್ಲಿಯ ಉದ್ಧರಣೆಗಳನ್ನು ಪ್ರಸ್ತುತಪಡಿಸಿದರು. ಉತ್ತರ ಮಲಬಾರ್ ಉಪ ವಿಭಾಗದ ಏಳು ಕೇಂದ್ರಗಳಿಂದ ಒಟ್ಟು 200 ಜನರು ಪಾಲ್ಗೊಂಡಿದ್ದರು.

ರಾಜಸ್ಥಾನದ ಭಿಲವಾರಾ ಕೇಂದ್ರದ ಯುವಕರು ನವೆಂಬರ್ 4ರಂದು ಪೂರ್ಣದಿನದ ಕಾರ್ಯಕ್ರಮವನ್ನು ಆಚರಿಸಿದರು. ಕಾರ್ಯಕ್ರಮದ ವಿಷಯ "ಗುರು" ಎಂಬುದಾಗಿತ್ತು. ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದು, ನಾಟಕ ಪ್ರದರ್ಶನಗಳ ಸತ್ರಗಳಿದ್ದವು. ಪೂಜ್ಯ ಗುರುಗಳ "ಸಹಜಮಾರ್ಗ ಟುವರ್ಡ್ಸ್ ಇನ್‌ಫಿನಿಟಿ"ಎಂಬ ಡಿವಿಡಿಯನ್ನು ತೋರಿಸಲಾಯಿತು. ಸಹಭಾಗಿಗಳು ಯುವಕರು ಮಾಡಿದ ಪ್ರಯತ್ನಗಳನ್ನು ಮೆಚ್ಚಿಕೊಂಡರು.

ಕೇರಳದ ಅಲುವಾ ಕೇಂದ್ರದಲ್ಲಿ ನವೆಂಬರ್ 18 ರಂದು ನಡೆಸಲಾದ ಪೂರ್ಣದಿನದ ಕಾರ್ಯಕ್ರಮದಲ್ಲಿ 200 ಅಭ್ಯಾಸಿಗಳು ಉಪಸ್ಥಿತರಿದ್ದರು. ಸತ್ಸಂಗಗಳ ಕಾರ್ಯಕ್ರಮದ ಜೊತೆಗೆ ಗುರುಗಳ ಭಾಷಣದ ವಿಡಿಯೋ ತುಣುಕುಗಳು, ಚರ್ಚೆ, ಹಾಡುಗಾರಿಕೆ ಹಾಗು ಪದ್ಯಪಠನಗಳು ದಿನದ ವೈಶಿಷ್ಟ್ಯಗಳಾಗಿದ್ದವು. ದೇವತ್ವ ಹಾಗು ರಾತ್ರಿ ಒಂಬತ್ತು ಗಂಟೆಯ ಪ್ರಾರ್ಥನೆ ಮುಂತಾದ ವಿಷಯಗಳ ವಿವರಣೆಗಳನ್ನು ಕೊಡಲಾಯಿತು.

ಆಂಧ್ರಪ್ರದೇಶದ ತಿರುಪತಿಯಲ್ಲಿ ಡಿಸೆಂಬರ್ 2 ದಿನಾಂಕದಂದು ಒಂದು ಬೇರೆ ತರಹದ ಪೂರ್ಣದಿನದ ಕಾರ್ಯಕ್ರಮವನ್ನು ಸುಮಾರು 130 ಜನ ಭಾಗಿಗಳಿಗಾಗಿ ಆಯೋಜಿಸಲಾಗಿತ್ತು. ಅಭ್ಯಾಸಿಗಳು ಪರ್ಯಾಯಿ ಹಾಗು ಆಯ್ದುಕೊಂಡ ಉತ್ತರಗಳ ಗುಣಮಟ್ಟವನ್ನು ನಿರ್ಧರಿಸುವ ಪ್ರಶ್ನಾವಳಿಗಳನ್ನು ಉತ್ತರಿಸಿ, ಸ್ವತಃ ಮೂಲ್ಯಮಾಪನವನ್ನು ಮಾಡಿಕೊಂಡರು. ಪ್ರಶ್ನೆಗಳು ಸಹಜಮಾರ್ಗ, ಇತರರಿಗಾಗಿ ಅಭ್ಯಾಸಿಗಳ ವರ್ತನೆ, ಸ್ವಯಂಸೇವಕರ ಕೆಲಸ ಹಾಗು ಆಶ್ರಮಗಳಿಗೆ ಸಂಬಂಧಿಸಿದ ವಿಷಯಗಳಾಗಿದ್ದವು. ಈ ಚಟುವಟಿಕೆಯು ಸಹಭಾಗಿಗಳಿಗೆ ತಮ್ಮ ಮನೋಭಾವಗಳನ್ನು ಅರ್ಥಮಾಡಿಕೊಳ್ಳಲು ಹಾಗು ಸುಧಾರಿಸಿಕೊಳ್ಳುವ ಬಗೆಯನ್ನು ಅರಿತುಕೊಳ್ಳಲು ಸಹಾಯಕವಾಗಿತ್ತು.

## ದಕ್ಷಿಣತಮಿಳುನಾಡಿನಲ್ಲಿಯ ಶಿಕ್ಷಕರಿಗೆ ಸಹಜಮಾರ್ಗದ ಪರಿಚಯ 2012

ಜಂಟಿಕಾರ್ಯದರ್ಶಿಗಳಾದ ಸಹೋದರ ಎ.ಪಿ.ದುರೈಯವರು 23 ನವೆಂಬರ್‌ನಿಂದ 1ನೇ ಡಿಸೆಂಬರ್‌ವರೆಗೆ ದಕ್ಷಿಣ ತಮಿಳುನಾಡಿನಲ್ಲಿ ಅನೇಕ ಮುಕ್ತಸಭೆಯ ಕಾರ್ಯಕ್ರಮಗಳನ್ನು ನಿರ್ವಹಿಸಿಕೊಂಡರು. ಮೊದಲನೆಯ ಮೂರುದಿನಗಳಲ್ಲಿ ತಂಜಾವೂರ, ಅರಿಯಾಲೂರ, ತಿರುವಾರುರ ಮತ್ತು ಪುದುಕೊಟ್ಟಾಯಿಯಲ್ಲಿದ್ದು ಉಳಿದ ಆರು ದಿನ ತಿರುನೆಲ್ವೇಲಿ ಮತ್ತು ಕನ್ಯಾಕುಮಾರಿ ಜಿಲ್ಲೆಗಳಲ್ಲಿದ್ದರು.

ಈ ಮುಕ್ತಸಭೆಗಳು ಶಿಕ್ಷಕರಿಗಾಗಿ ಕೇಂದ್ರೀಕೃತವಾಗಿದ್ದು, ಹದಿನೇಳು ಶಾಲೆಗಳಲ್ಲಿಯ ಒಟ್ಟು 750 ಶಿಕ್ಷಕರು ಉಪಸ್ಥಿತರಿದ್ದರು. ಅವರಲ್ಲಿ ಸುಮಾರು 200 ಜನರು ಧ್ಯಾನವನ್ನು ಪ್ರಾರಂಭಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಅವರಿಗೆ ಸಾಧನೆಯನ್ನು ಪ್ರಾರಂಭಿಸುವಮೊದಲು ತಮ್ಮನ್ನು ಸಿದ್ಧಪಡಿಸಿಕೊಳ್ಳಲು ಆರಂಭಿಕ ಪುಸ್ತಿಕೆಗಳನ್ನು ಕೊಡಲಾಯಿತು.

ಕಾರ್ಯಕ್ರಮವನ್ನು ನೆರವೇರಿಸುವ ಮೊದಲು ಶಾಲೆಗಳ ಮುಖ್ಯೋಧ್ಯಾಪಕರಿಗೆ ಸರಿಯಾಗಿ ಮಾಹಿತಿಯನ್ನೀಯಲಾಗಿಲ್ಲವೆಂಬುದು ಮನವರಿಕೆಯಾಗಿ ಇನ್ನುಮುಂದೆ ಮುಕ್ತಸಭೆಗಳನ್ನು ನಡೆಸಲು ಅನುಮತಿ ಪಡೆಯಲು ಸಂಪರ್ಕಿಸುವಾಗ ಒಂದು ಪತ್ರ, ಜೊತೆಗೆ ಓದಲು ಸಾಹಿತ್ಯವನ್ನೂ ಕೊಡಬೇಕೆಂದು ನಿರ್ಧರಿಸಲಾಯಿತು.

ಸಹೋದರ ದುರೈಯವರು ಗುರುಗಳಿಗೆ ಹಿಂದಿನ ಕೆಲ ದಶಕಗಳಿಗೆ ಹೋಲಿಸಿದರೆ, ಈಗ ಜನರು ಸಹಜಮಾರ್ಗದ ಸಂದೇಶವನ್ನು ಸ್ವೀಕರಿಸಲು ಅನುಕೂಲವಾಗಿದ್ದಾರೆಂದು ತಿಳಿಸಿದಾಗ, ಅವರು, ಅಂತೆಯೇ ಬಾಬೂಜೀ ಮಹಾರಾಜರು "ಜನರ ಹೃದಯಗಳು ತೆರೆಯುತ್ತಿವೆ ಎಂದು ಹೇಳುತ್ತಲೇ ಇರುತ್ತಾರೆ" ಎಂದರು.

ಈ ಮುಕ್ತಸಭೆಗಳ ಸರಣಿಗಳು, ಇವನ್ನು ನೆರವೇರಿಸುತ್ತಿರುವ ಪ್ರಶಿಕ್ಷಕರು ಮತ್ತು ಅಭ್ಯಾಸಿಗಳಿಗೆ ಪ್ರಶಿಕ್ಷಣದ ತಳಹದಿಗಳಾದವು.

ಪ್ರಶಿಕ್ಷಕರಾದ ಸೋ.ನಲ್ಲಾಯರಾಮ(ವೆಲ್ಲಿವೂರ), ಅಂಬಲಗನ್(ತಿರುನೆಲ್ವೇಲಿ), ಡಾ. ನಾಥನ್(ನಾಗರಕೊಯಲ್), ಕೃಷ್ಣರಾಜನ್(ವದಕಂಕುಲಮ್) ಮತ್ತು ಸಹೋದರಿ ಡಾ. ರಾಜಲಕ್ಷ್ಮಿ(ತಿರುನೆಲ್ವೇಲಿ) ಯವರಿಗೆ, ಸ್ವಯಂಸೇವಕರು ಸಕ್ರಿಯ ಸಹಾಯ ನೀಡಿದರು. ತಂಜಾವೂರ್ ಮತ್ತು ಸಮೀಪದ ಕೇಂದ್ರಗಳಲ್ಲಿ, ವಿಭಾಗ ಪ್ರಮುಖರಾದ ಸೋ.ಬಿ.ಎಸ್. ಮುರುಗನ್‌ರವರು, ಸ್ಥಳೀಯ ಪ್ರಶಿಕ್ಷಕರಾದ ಸೋ.ಸುಬ್ರಹ್ಮಣ್ಯಮ್, ಪೊಯಾಮೊಳಿ ಹಾಗು ಸೋ.ಕಾಮಾಕ್ಷಿಯವರ ಸಹಾಯದಿಂದ ಕಾರ್ಯಕ್ರಮಗಳನ್ನು ನೆರವೇರಿಸಿದರು.

ಈ ಎಲ್ಲಾ ಚಟುವಟಿಕೆಗಳಲ್ಲಿ ಗುರುಗಳ ಉಪಸ್ಥಿತಿಯು ಹೊರಸೂಸುತ್ತಿತ್ತು ಹಾಗು ಅವರು ಎಲ್ಲಾ ಸಂಸ್ಥೆಗಳಲ್ಲಿಯ ಕಾರ್ಯಕ್ರಮಗಳನ್ನು ಅನುಕೂಲಕರವಾಗಿ ನೆರವೇರಿಸಲು ಎಲ್ಲಾ ಬಾಗಿಲುಗಳನ್ನು ತೆರೆದಿಟ್ಟಂತೆ ತೋರುತ್ತಿತ್ತು.



ಪ್ರಭಾ ಕೇಂದ್ರ

# ಆನಂದ ಆಶ್ರಮ, ಗುಜರಾತ್

"ಗುರುಗಳನ್ನು ನಾವೇನಾಗಬೇಕಾಗಿದೆಯೋ ಅದರ ಸೂಚಕದಂತೆ ಉಪಯೋಗಿಸಿಕೊಳ್ಳಬೇಕು ಹಾಗು ಸಹಜಮಾರ್ಗವು ನಿನಗಾಗಿ ಏನು ಮಾಡುತ್ತಿದೆ ಎಂಬುದನ್ನು ನಿಮ್ಮಲ್ಲಿ ನೀವೇ ನೋಡಿ ಕಂಡುಕೊಳ್ಳಬೇಕು. ಆಗ ನಾವು ನಮ್ಮ ದಾರಿಯಲ್ಲಿ ಮುಂದುವರಿಯುತ್ತೇವೆ. ನಾವು ಶಾಂತವಾಗಿ, ಎಲ್ಲವನ್ನು ಉಪೇಕ್ಷಿಸುತ್ತ ಮುನ್ನಡೆಯುತ್ತೇವೆ. ನಾನು ಗುರಿಯನ್ನು ತಲುಪಬೇಕು, ಗುರಿಯು ನನ್ನೆದುರಿಗಿದೆ. ನಾನೇನಾಗಬೇಕೆಂಬುದನ್ನು ಅದು ನನಗೆ ತೋರಿಸುತ್ತದೆ. ನನ್ನನ್ನು ನಾನು ನೋಡಿಕೊಂಡರೆ, ನಾನು ಯಾವುದನ್ನು ಕಿತ್ತಿ ತೆಗೆಯಬೇಕು, ಅಥವಾ ನನ್ನಲ್ಲಿ ಯಾವುದನ್ನು ಕೂಡಿಸಬೇಕು ಅಥವಾ ಕಳೆಯಬೇಕೆಂಬುದನ್ನು ಕಂಡುಕೊಳ್ಳುತ್ತೇವೆ. ಅದು ಸುಲಭ, ಸುಗಮಮತ್ತು ಅನುಕೂಲಕರ ಪ್ರವಾಸವಾಗಿ, ಬೇಗ ಗುರಿಯನ್ನು ತಲುಪುವಂತಾಗುತ್ತದೆ."

(ಆನಂದ, ಗುಜರಾತ್‌ನಲ್ಲಿ 29 ಜನವರಿ 2004ರ ಗುರುಗಳ ಭಾಷಣ.)







"ಆನಂದ ಆಶ್ರಮ" ಇದು ಗುರುಗಳು, ಆನಂದ, ಗುಜರಾತ್, ನಲ್ಲಿಯ ಆಶ್ರಮಕ್ಕಿತ್ತ ಹೆಸರು. ಕಾರಣ ಇಲ್ಲಿ ವಿಪುಲವಾದ ಆನಂದವನ್ನು ಕಾಣಬಹುದು. ಆನಂದವು ಜಿಲ್ಲೆಯ ಮುಖ್ಯಾಲಯವಾಗಿದ್ದು, ಅಹಮದಾಬಾದ ಮತ್ತು ವಡೋದರಾ ಪಟ್ಟಣಗಳ ನಡುವೆ ಇದೆ. ಹಾಗು ಭಾರತದಲ್ಲಿ ಶ್ವೇತಕ್ರಾಂತಿಗೆ ನಾಂದಿಯಾಗಿರುವ ಅಮೂಲ್ ಡೇರಿ, IRMA, ಮತ್ತು NDDB ಗಳಿಂದ ಪ್ರಸಿದ್ಧವಾಗಿದೆ.

ಗುರುಗಳು ಎಂಬತ್ತನೇ ಹಾಗು ತೊಂಬತ್ತನೇ ದಶಕಗಳಲ್ಲಿ ಪದೇ ಪದೇ ನೀಡಿದ ಭೇಟಿಗಳಿಂದಲೂ, 1992–93 ನೇ ಸಾಲಿನಲ್ಲಿ ಗುರುಗಳ ಪತ್ನಿ ಸುಲೋಚನಾ ಮಾಮಿಯವರು ಉಪಚಾರಕ್ಕಾಗಿ ಕೆಲ ತಿಂಗಳುಕಾಲ ಇಲ್ಲಿ ತಂಗಿದ್ದುದರಿಂದಲು ಆನಂದ ಕೇಂದ್ರವು ಏಳಿಗೆ ಹೊಂದಿತು. ಗುರುಗಳು IRMA, NDDBಹಾಗು ಪಶುವೈದ್ಯಕೀಯ ಕಾಲೇಜುಗಳಲ್ಲಿಯೂ ಉಪನ್ಯಾಸವನ್ನಿತ್ತರು.

1995ರಲ್ಲಿ ಗುರುಗಳು ಸಹೋದರ ಪಿ.ಎಸ್. ಭಾರ್ಗವರವರಿಗೆ, ತಮ್ಮ ನಿವೇಶನದ ಒಂದು ಭಾಗದಲ್ಲಿ, SRCMಗಾಗಿ ಧ್ಯಾನಕಕ್ಷವನ್ನು ಕಟ್ಟಿಸಲು ಅನುಮತಿಯನ್ನಿತ್ತರು. ಮತ್ತು ಇದಕ್ಕೆ "ಮಂಡಪಮ್" ಎಂದು ಹೆಸರಿಟ್ಟರು. 1996 ರಲ್ಲಿ, ಸಹೋದರಿ ಅಂಜನಾ ನಾಗರ್‌ರವರು, ಆನಂದದಿಂದ ಐದು ಕಿ.ಮೀ.ದೂರದಲ್ಲಿರುವ ಹಡಗುಡ ಎಂಬ ಗ್ರಾಮದಲ್ಲಿಯ ಪುಟ್ಟ ಭೂಭಾಗವೊಂದನ್ನು ಆಶ್ರಮದ ಕಟ್ಟಡಕ್ಕಾಗಿ ವಿನಯಪೂರ್ವಕವಾಗಿ ಅರ್ಪಿಸಿದರು.

ಜನವರಿ 1997 ರಲ್ಲಿ ಗುರುಗಳು ಆಶ್ರಮದ ಸ್ಥಳಕ್ಕೆ ಭೇಟಿನೀಡಿ ಅಲ್ಲಿನ ವಸಾಹತಿಗೆ "ರಾಮಚಂದ್ರಪುರಂ" ಎಂದು ಹೆಸರಿಟ್ಟರು. ಪೂಜ್ಯ ಗುರುಗಳ ಅನುಮತಿಯಿಂದ, 5 ನೇ ಸೆಪ್ಟೆಂಬರ್ 2000 ರಂದು 150 ಅಭ್ಯಾಸಿಗಳು ಕೂಡುವಷ್ಟು ಸ್ಥಳಾವಕಾಶವಿದ್ದ ಹೊಸ ಕಟ್ಟಡದ ಉದ್ಘಾಟನೆಯು ಆಗಿನ ವಿಭಾಗ ಪ್ರಮುಖರಾದ ಸಹೋದರ ಮಧುಕರ ಕೋಚರ್ ಅವರಿಂದ ನೆರವೇರಿಸಲಾಯಿತು. ಈ ಸಮಾರಂಭದಲ್ಲಿ, ಆನಂದ, ವಡೋದರಾ, ವನಕಬೋರಿ ಮತ್ತು ನಡಿಯಾಡ ಕೇಂದ್ರಗಳಿಂದ ಸುಮಾರು 165ಅಭ್ಯಾಸಿಗಳು ಆಗಮಿಸಿದರು.





ಪೂಜ್ಯ ಗುರುಗಳು 30 ಜನವರಿ 2004 ರಂದು ಆನಂದಗೆ ಭೇಟಿನೀಡಿದರು. ಆ ವೇಳೆಗಾಗಲೇ ಹೊರಗಿನ ಜಗುಲಿ, ಹಾಗು ಖಾಲಿಯಿದ್ದ ಸ್ಥಳದಲ್ಲಿ ಬೆಳೆಸಲಾದ ಕೈದೋಟಗಳನ್ನು ಇದಕ್ಕೆ ಜೋಡಿಸಲಾಗಿತ್ತು. ಮತ್ತು ನೀರಿನ ಸರಬರಾಜಿಗಾಗಿ, ಉಗಮ ಸ್ಥಳವನ್ನು ನಿಗದಿಪಡಿಸಲಾಗಿತ್ತು. ಸತ್ಸಂಗದ ನಂತರ ಗುರುಗಳು, ಆಶ್ರಮದ ಮುಂಭಾಗದಲ್ಲಿ, ಕದಂಬದ ಸಸಿಯನ್ನು ನೆಟ್ಟರು. ಈಗ ಅದು 40 ಅಡಿಗಳಷ್ಟು ಉದ್ದ ಬೆಳೆದುನಿಂತು, ಉಳಿದ ಗಿಡ ಗಂಟೆಗಳೊಂದಿಗೊಡಗೂಡಿ, ಆಶ್ರಮಕ್ಕೊಂದು ವಿಲಕ್ಷಣ ಸೊಬಗನ್ನುಂಟುಮಾಡಿದೆ.

**To download or subscribe to this newsletter, please visit [http://www.sahajmarg.org/newsletter/india](http://www.sahajmarg.org/newsletter/india) For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.